ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2019 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 1
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | October 2019 | Monthly


## ಸ್ವಚ್ಛ ಭಾರತ ಅಭಿಯಾನ

15-08-2014
ಕನಸು



2019
ನನಸು



## ಪ್ಲಾಸ್ಟಿಕ್ ಮುಕ್ತ ಭಾರತ

02-10-2019
ಇಂದು



2024
ನನಸಾಗಿಸೋಣ



ಮಹಾತ್ಮಾ ಗಾಂಧೀಜಿಯವರ 150 ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ
ತೆಗೆದುಕೊಳ್ಳಲಾದ ಪ್ಲಾಸ್ಟಿಕ್ ಮುಕ್ತ ಭಾರತ ಕನಸನ್ನು ನಾವೆಲ್ಲರೂ ಸೇರಿ ನನಸಾಗಿಸೋಣ

## ಸಂಪಾದಕೀಯ

ಒಂದು ಪತ್ರಿಕೆಯನ್ನು ವರ್ಷಗಟ್ಟಲೆ ಅದೂ ಧನವಂತರ ಆರ್ಥಿಕ ಬೆಂಬಲವಿಲ್ಲದೆ, ಜಾಹಿರಾತಿನ ಸಹಾಯವಿಲ್ಲದೆ ನಡೆಸುವುದು ಎಷ್ಟು ಕಷ್ಟ ಎಂದು ಎಲ್ಲಾ ಪತ್ರಿಕಾ ಪ್ರಿಯರಿಗೆ ತಿಳಿದ ವಿಚಾರವೇ ಆಗಿದೆ, ಆದರೆ ಒಂದು ವಿಚಾರಕ್ಕೆ ಬದ್ಧರಾದ ನಾವು ನಿಮ್ಮ "ಶಿಕ್ಷಕ ಸಮಾಚಾರವನ್ನು" ಶಿಕ್ಷಕರಿಗೆ ತಲುಪಿಸಲೇಬೇಕೆಂಬ ಹಠದಿಂದ ಅನೂಚಾನವಾಗಿ ಕಳೆದ 34 ವರ್ಷಗಳಿಂದ ಒಮ್ಮೆಯೂ ತಪ್ಪದೆ ನಡೆಸುಕೊಂಡು ಬಂದಿದ್ದೇವೆ. ಈಗ ನಿಮ್ಮ ಕೈಲಿರುವುದು 35ನೇ ಸಂಪುಟದ ಮೊದಲ ಸಂಚಿಕೆ,

ಈ ನಮ್ಮ ಹಠಕ್ಕೆ ಕಾರಣವಾದರೂ ಏನು ? ಅದು ನಮ್ಮ ನಂಬಿಕೆ !

"ನಮ್ಮ ಶಿಕ್ಷಕರು ರಾಷ್ಟ್ರ ಪುನರ್ನಿರ್ಮಾಪಕರು. ಇಂದಿನ ಮಕ್ಕಳನ್ನು ಭಾವೀ ಸುಪ್ರಜೆಗಳಾಗಿ ರೂಪಿಸುವವರು. ಇಂಥವರಿಗೆ ತಮ್ಮ ವೃತ್ತಿಯ ಬಗ್ಗೆ, ಕರ್ತವ್ಯದ ಬಗ್ಗೆ ಪ್ರೀತಿ ಗೌರವ ಹುಟ್ಟಬೇಕು. ತಾವು ಕೇವಲ ಸಂಬಳಕ್ಕಾಗಿ ದುಡಿಯುವ ಕಾರ್ಮಿಕರಲ್ಲ.

"ಕಟ್ಟುವೆವು ಹೊಸ ನಾಡೊಂದನು ರಸದ ಬೀಡೊಂದನು, ನಮ್ಮೆದೆಯ ಕನಸುಗಳೇ ಕಾಮಧೇನು, ಆದಾವು ಕರೆದಾವು ವಾಂಛಿತವನು " ಎಂದು ಕವಿ ಗೋಪಾಲಕೃಷ್ಣ ಅಡಿಗರು ಬರೆದಂತೆ, ಭಾವಿ ಭಾರತದ ಪುನರುತ್ಥಾನದ ಕನಸು ಕಂಡವರು, ಅಂಥವರಿಗೆ ನಮಗಾದ, ಆಗುತ್ತಿರುವ ನಷ್ಟವನ್ನೂ ಪರಿಗಣಿಸದೆ ಪತ್ರಿಕೆ ತಲುಪಿಸಬೇಕು. ಅದನ್ನು ಓದುವ ಅವರು ತಮ್ಮ ಕನಸು ಸಾಕಾರವಾಗಲು ಏನು ಮಾಡಬಹುದು ಎಂಬುದನ್ನು ತಿಳಿಯುವರು" ಎಂಬ ನಮ್ಮ ನಂಬಿಕೆ,

ಈ ನಮ್ಮ ನಂಬಿಕೆ ಸಾರ್ಥಕವಾಗಲು ನಮ್ಮೆಲ್ಲಾ ಚಂದಾದಾರರು, ಓದುಗರು ನಮ್ಮ ಬೆನ್ನ ಹಿಂದೆ ನಿಲ್ಲಬೇಕಿದೆ. ನೀವು ಈ ರೀತಿ ನಮಗೆ ನಿಮ್ಮ ಸಹಾಯ ಹಸ್ತ ನೀಡಬಹುದು

1) ನಿಮ್ಮ ಚಂದಾ ಹಣವನ್ನು ಕಾಲ ಕಾಲಕ್ಕೆ ಸರಿಯಾಗಿ ನವೀಕರಿಸುವುದು,

2) ನಿಮ್ಮ ಗೆಳೆಯರನ್ನು ಚಂದಾದಾರರನ್ನಾಗಿ ಮಾಡುವುದು.

3) ನಿಮ್ಮ ಶಾಲೆಗೆ ಪತ್ರಿಕೆ ತರಿಸುವುದು.

4) ಜಾಹಿರಾತು ಸಂಗ್ರಹಿಸಿ ಕೊಡುವುದು.

ನಮ್ಮ ಮನವಿಗೆ ಓಗೊಡುವಿರಲ್ಲವೇ?

ಈ ಹೊಸ ಸಂಪುಟದಲ್ಲಿ ಓದುಗರು ಅನೇಕ ನವೀನತೆಗಳನ್ನು ಕಾಣಬಹುದು. ನಮ್ಮ ಓದುಗರಿಗೆ ಜ್ಞಾನದ ರಸದೌತಣ ನೀಡಬೇಕೆಂಬುದು ನಮ್ಮ ಆಶಯ. ಸಂಪಾದಕೀಯ ತಂಡವು ಹಿರಿಯರ ಮಾರ್ಗದರ್ಶನದಲ್ಲಿ ವೈವಿಧ್ಯತೆಯ ವಿಚಾರಗಳನ್ನು ನೀಡಲು ತೀರ್ಮಾನಿಸಿದೆ.

- ಸಂಸ್ಕೃತಿ, ಸಂಸ್ಕಾರದ ಮಾಹಿತಿ ನೀಡಲು – **ಇದು ಮೂಢನಂಬಿಕೆಯಲ್ಲ, ಮೂಲನಂಬಿಕೆ**
- ನಾಡಿನ ತೆರೆಮರೆಯ ಸ್ವಾತಂತ್ರ್ಯ ಹೋರಾಟಗಾರರ ಸಾಹಸಗಾಥೆ ತಿಳಿಯಲು – **ಅವಿಸ್ಮರಣೀಯರು**
- ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಅತಿ ಅವಶ್ಯಕವಾಗಿ ಬೇಕಾದ ನೈತಿಕ ಮೌಲ್ಯಗಳ ಬಗ್ಗೆ – **ಮೌಲ್ಯೋಪಾಸನೆ**
- ಓದುಗರಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ವೇದಿಕೆ – **ವಿಶೇಷ ಜ್ಞಾನ**
- ಇವೆಲ್ಲವುಗಳಿಗೂ ಮಿಗಿಲಾಗಿ ಸಂಘಟನೆಗಾಗಿ ತಮ್ಮ ಜೀವಮಾನವನ್ನೇ ಒತ್ತೆಯಿಟ್ಟಿರುವ ನಮ್ಮ ಸಂಘಟನೆಯ ಹಿರಿಯರ ಅಮೃತ ಅನುಭವ – **ನೆನಪಿನ ಅಂಗಳದಿಂದ**
- ಅಲ್ಲದೆ ಇಲಾಖೆಯ ಸುತ್ತೋಲೆಗಳು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರು ನಡೆಸುವ ಕಾರ್ಯಕ್ರಮಗಳ ವರದಿಯೂ ಸಹ ಇರುತ್ತದೆ.

ನಮ್ಮ ಓದುಗರು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಲಾಗಿದೆ. ಓದುಗರೆಲ್ಲರೂ ವಾಟ್ಸ್ ಅಪ್ ಸಂಖ್ಯೆ 9886598436 ದಲ್ಲಿ ರಚಿಸಿರುವ ಶಿಕ್ಷಕ ಸಮಾಚಾರದ **"ನನ್ನ ನುಡಿ–ಶಿಕ್ಷಕ ಸಮಾಚಾರಕ್ಕೆ"** ಎನ್ನುವ ಗುಂಪಿಗೆ ಅವಶ್ಯಕವಾಗಿ ತಿಳಿಸಬೇಕೆಂದು ಕೋರಿಕೆ. ಶಿಕ್ಷಕ ಸಮಾಚಾರದಲ್ಲಿ ಪ್ರಕಟವಾಗಿರುವ ವಿಷಯಗಳ ಬಗ್ಗೆ ಚರ್ಚೆ, ವಿಮರ್ಶೆ, ಸಲಹೆ ಮತ್ತು ಸೂಚನೆಗಳನ್ನು ನೀಡಬಹುದು. ಇ–ಮೇಲ್ ಮುಖಾಂತರವೂ ನೀಡಬಹುದು. ಉತ್ತಮ ಸಲಹೆ, ಸೂಚನೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಂಪಾದಕ

## ಸೂಕ್ತಿ



ಆತ್ಮನೋಽಖವಮತಾಂ ಬ್ರೂಯುಃ
ಉತ್ತಮಾ ಅಪಿ ಸರ್ವಶಃ ।
ಕದಾಚಿದೇವ ಸ್ವಗುಣಾನ್
ಸ್ನಿಗ್ಧೇಷ್ವೇವ ಹಿ ಸಾಧವಃ ॥

ಎಲ್ಲರಿಗಿಂತ ಉತ್ತಮವಾಗಿದ್ದರೂ ವಿದ್ವಾಂಸರು ಅನೇಕ ಸಾರಿ ವಿನಮ್ರಭಾವದಿಂದ ತಾವು ಸಣ್ಣವರು ಎನ್ನುತ್ತಾರೆ. ಕೆಲವೊಮ್ಮೆ ಮಾತ್ರ ತಮ್ಮ ಉತ್ತಮತ್ವಕ್ಕೆ ಕಾರಣವಾದ ಸದ್ಗುಣಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಇದು ದೊಡ್ಡವರ ಸ್ವಭಾವ. ಹಾಗೆ ತಮ್ಮಲ್ಲಿರುವುದನ್ನು ಹೇಳಿಕೊಳ್ಳುವುದರಿಂದ ಅಹಂಕಾರಕ್ಕೆ ಅವಕಾಶವಿಲ್ಲ. ಇಲ್ಲದ್ದನ್ನು ಹೇಳಿಕೊಂಡರೆ ಮಾತ್ರ ದೋಷ ಎಂದೆನಿಸುತ್ತದೆ.

- ಭಾಗವತ ತಾತ್ಪರ್ಯ

## ಪರಿವಿಡಿ


- ಉಪಾಧ್ಯಾಯರಾಗಿ ಗಾಂಧೀಜಿ 3
- ಮುಖ್ಯ ವ್ಯಕ್ತಿ – ಮುಖ್ಯ ಕಾಲ – ಮುಖ್ಯ ಕೆಲಸ 4
- ಭಾರತೀಯ ಸಂಸ್ಕೃತಿಯಲ್ಲಿ ಕುಂಕುಮದ ಮಹತ್ವ 5
- ಒರಿಗಾಮಿ: ಕಾಗದ ಮಡಚುವ ಕೌಶಲ 6
- ಗಾಂಧಿ ವಿಚಾರಧಾರೆಯನ್ನು ಪಾಲಿಸದವರು ಯಾರು ? 7
- 'ನಾವು ಸತ್ತು, ದೇಶವನ್ನೆಬ್ಬಿಸೋಣ' ಎಂದಿದ್ದ ಆ 'ಹುಲಿ'! (ಭಾಗ–1) 10
- "ಶಿಕ್ಷಣ ಮತ್ತು ಶಿಕ್ಷಕ" ಸಂವಾದ 11
- ಚಿತ್ರಸುದ್ದಿ 12


**ಗಾಂಧೀಜಿ 150**

**ಮಾಲಿಕೆ–1**

# ಉಪಾಧ್ಯಾಯರಾಗಿ ಗಾಂಧೀಜಿ

**ಶ್ವೇತಾದ್ರಿ**
ನಿವೃತ್ತ ಮುಖ್ಯ ಶಿಕ್ಷಕರು

ಮೋಹನದಾಸ್ ಕರಮಚಂದ್ ಗಾಂಧಿಯವರು ದೇಶ ವಿದೇಶಗಳಲ್ಲಿ 'ಮಹಾತ್ಮ'ರೆಂದು ಗೌರವಿಸಲ್ಪಟ್ಟವರು. ಅದು ನಮಗೆಲ್ಲ ಹೆಮ್ಮೆಯೂ ಹೌದು. 2019 ಅಕ್ಟೋಬರ್ 2ಕ್ಕೆ ಅವರು ಜನಿಸಿ 150 ವರ್ಷಗಳು ಸಂದಿದೆ. ಮಹಾತ್ಮರ ವಿಚಾರಗಳು, ಚಿಂತನೆಗಳು, ನಡೆ – ನುಡಿಗಳು ಎಲ್ಲ ಕಾಲಕ್ಕೂ ಅನುಕರಣೀಯ ಹಾಗೂ ಆದರ್ಶ ಪ್ರಾಯವಾಗಿರುತ್ತದೆ. ಈ ನಿಟ್ಟಿನಲ್ಲಿ 'ಶಿಕ್ಷಕ ಸಮಾಚಾರ'ವು ಅಕ್ಟೋಬರ್ ತಿಂಗಳಿನಿಂದ 'ಗಾಂಧೀಜಿ 150' ಮಾಲಿಕೆಯನ್ನು ಪ್ರಾರಂಭಿಸುತ್ತಿದೆ. ಈ ಮಾಲಿಕೆಯ ಮೂಲಕ ಗಾಂಧೀಜಿಯವರ ಜೀವನದಲ್ಲಿ ನಡೆದ ಘಟನೆಗಳು, ಅವರ ವಿಚಾರಗಳನ್ನು ಓದುಗರ ಚಿಂತನೆಗೆ ನೀಡುವ ಪ್ರಯತ್ನ ಈ ಮಾಲಿಕೆಯದು.



**ಅಕ್ಟೋಬರ್ ತಿಂಗಳಿನಿಂದ 'ಗಾಂಧೀಜಿ ೧೫೦' ಮಾಲಿಕೆಯನ್ನು ಪ್ರಾರಂಭಿಸುತ್ತಿದ್ದೇವೆ. ಈ ಮಾಲಿಕೆಯ ಮೂಲಕ ಗಾಂಧೀಜಿಯವರ ಜೀವನದಲ್ಲಿ ನಡೆದ ಘಟನೆಗಳು, ಅವರ ವಿಚಾರಗಳನ್ನು ಓದುಗರ ಚಿಂತನೆಗೆ ನೀಡುವ ಪ್ರಯತ್ನ ಈ ಮಾಲಿಕೆಯದು.**

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಸ್ಥಾಪಿಸಿದ ಟಾಲ್‌ಸ್ಟಾಯ್ ಆಶ್ರಮ ಬೆಳೆಯುತ್ತ ಹೋದಂತೆ ಅಲ್ಲಿನ ಮಕ್ಕಳಿಗೆ ವಿದ್ಯಾಭ್ಯಾಸದ ಏರ್ಪಾಡು ಮಾಡುವುದು ಅವಶ್ಯವಾಯಿತು. ಆಶ್ರಮದಲ್ಲಿ ಹಿಂದೂ, ಮುಸಲ್ಮಾನ್, ಕ್ರೈಸ್ತ, ಪಾರಸೀ ಬಾಲಕ, ಬಾಲಕಿಯರಿದ್ದರು. ಆಶ್ರಮದಲ್ಲಿ ಗಾಂಧಿಯವರು ತಂದೆಯ ಸ್ಥಾನದಲ್ಲಿದ್ದರು. ಅವರ ಅಭಿಪ್ರಾಯ ಹೀಗಿತ್ತು. "ಆದರ್ಶ ಪರಿಸ್ಥಿತಿಯಲ್ಲಿ ನಿಜವಾದ ವಿದ್ಯೆಯನ್ನು ಮಕ್ಕಳಿಗೆ ಕಲಿಸಬೇಕಾದವರು ಮಾತಾಪಿತೃಗಳೇ. ಮಕ್ಕಳ ಶಿಕ್ಷಣದಲ್ಲಿ ಹೊರಗಡೆಯ ಪ್ರಭಾವ ಆದಷ್ಟು ಕಡಿಮೆ ಇರಬೇಕು". ಹೀಗಾಗಿ ಅಲ್ಲಿನ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಜವಾಬ್ದಾರಿಯನ್ನು ಗಾಂಧೀಜಿಯವರೇ ವಹಿಸಿಕೊಂಡರು.

ಗಾಂಧೀಜಿಯವರು ಹೃದಯ ಶಿಕ್ಷಣ ಅಥವಾ ಚಾರಿತ್ರ್ಯ ವಿಕಾಸಕ್ಕೆ ಮೊದಲ ಸ್ಥಾನವನ್ನು ಕೊಟ್ಟರು. ಸಚ್ಚಾರಿತ್ರ್ಯದ ಬೆಳವಣಿಗೆಯೇ ಮಕ್ಕಳ ಶಿಕ್ಷಣದ ಆಧಾರ ಸ್ತಂಭವೆಂಬುದು ಗಾಂಧೀಜಿಯವರ ಎಣಿಕೆ. ಸಚ್ಚಾರಿತ್ರ್ಯದ ತಳಹದಿ ಭದ್ರವಾಗಿ ಹಾಕಿದರೆ ಉಳಿದ ವಿಷಯಗಳನ್ನು ವಿದ್ಯಾರ್ಥಿಗಳು ತಾವಾಗಿಯೇ ಕಲಿಯಬಲ್ಲರು ಎಂಬ ಭಾವನೆಯನ್ನು ಹೊಂದಿದ್ದರು. ಪುಸ್ತಕ ಜ್ಞಾನದ ಜೊತೆಗೆ ಆಶ್ರಮದಲ್ಲಿ ಔದ್ಯೋಗಿಕ ಶಿಕ್ಷಣವನ್ನೂ ನೀಡಲಾಗುತ್ತಿತ್ತು. ಪ್ರತಿಯೊಬ್ಬ ಬಾಲಕನಿಗೂ ಯಾವುದಾದರೂ ಒಂದು ಉಪಯುಕ್ತವಾದ ದೈಹಿಕ ಶ್ರಮದ ಕಸುಬನ್ನು ಕಲಿಸುವ ಉದ್ದೇಶದಿಂದ ಗಾಂಧೀಜಿಯವರು ತಮ್ಮ ಸಹಾಯಕರಾದ ಮಿ. ಕಲ್ಲನ್‌ಬಾಕ್‌ರವರಿಂದ ಪಾದರಕ್ಷೆಗಳನ್ನು ಹೊಲಿಯುವುದನ್ನು ಕಲಿತು ಕೊಂಡರು. ಈ ಕೆಲಸದೊಂದಿಗೆ ಮರದ ಕೆಲಸ ಮಾಡುವ ಅನುಭವವಿದ್ದ ಮಿ. ಕಲ್ಲನ್‌ಬಾಕ್‌ರ ಸಹಾಯದಿಂದ ವಿದ್ಯಾರ್ಥಿಗಳಿಗೆ ಮರಗೆಲಸದ ತರಗತಿ ಹಾಗೂ ಜೋಡು ಹೊಲೆಯುವ ತರಗತಿಗಳನ್ನು ಪ್ರಾರಂಭಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಆಗ ಭಾರತೀಯರಿಗೆ ದೊರೆಯುತ್ತಿದ್ದುದು ಓದುವುದು, ಬರೆಯುವುದು ಹಾಗೂ ಸ್ವಲ್ಪಮಟ್ಟಿನ ಗಣಿತ. ಹಾಗಾಗಿ ಆಶ್ರಮದಲ್ಲಿ ಮಕ್ಕಳಿಗೆ ದೊರೆಯುತ್ತಿದ್ದ ಶಿಕ್ಷಣ ವಿಭಿನ್ನವಾಗಿತ್ತು.

**ಉಪಾಧ್ಯಾಯರು ತಾವು ಮಾಡದೆ ಇದ್ದ ಯಾವ ಕಾರ್ಯವನ್ನೂ ಹುಡುಗರಿಗೆ ಮಾಡಲು ಹೇಳಕೂಡದೆಂಬ ನಿಯಮ ಟಾಲ್‌ಸ್ಟಾಯ್ ಆಶ್ರಮದಲ್ಲಿತ್ತು. ಆದ್ದರಿಂದ ಬಾಲಕರು ಕೆಲಸ ಮಾಡುವಾಗಲೆಲ್ಲ ಅವರ ಜೊತೆಯಲ್ಲಿ ಉಪಾಧ್ಯಾಯರೂ ಕೆಲಸ ಮಾಡುತ್ತಾ ಸಹಕರಿಸುತ್ತಿದ್ದರು.** ಇದರಿಂದಾಗಿ ವಿದ್ಯಾರ್ಥಿಗಳು ತಾವು ಕಲಿಯುವುದನ್ನು ಸಂತೋಷದಿಂದ ಕಲಿಯುತ್ತಿದ್ದರು. ಈ ಆದರ್ಶ ಇಂದು ಎಲ್ಲಾ ಉಪಾಧ್ಯಾಯರಲ್ಲೂ ಅವಶ್ಯವಾಗಿ ಇರಬೇಕಲ್ಲವೇ? ●

**ರಾಮರಾಜ್ಯವೇ ಸ್ವರಾಜ್ಯದ ಆದರ್ಶ. ರಾಮರಾಜ್ಯವೆಂದರೆ ಧರ್ಮದ ರಾಜ್ಯ, ನ್ಯಾಯದ ರಾಜ್ಯ, ಪ್ರೇಮದ ರಾಜ್ಯ.**

– ಮಹಾತ್ಮ ಗಾಂಧೀಜಿ

**ಮೌಲ್ಯೋಪಾಸನೆ**

# ಮುಖ್ಯ ವ್ಯಕ್ತಿ – ಮುಖ್ಯ ಕಾಲ – ಮುಖ್ಯ ಕೆಲಸ

**(ಗಾಂಧೀಜಿ– 150 ಇದರ ಅಂಗವಾಗಿ 'ಶಿಕ್ಷಕ ಸಮಾಚಾರ'ದ ಸಂಚಿಕೆಗಳ ಅಂತರಂಗದಲ್ಲಿ ಒಂದಷ್ಟು ಹೊಸತನವನ್ನು ತರಲಾಗುತ್ತಿದೆ. ಈ ನಿಟ್ಟಿನಲ್ಲಿ 'ಮೌಲ್ಯೋಪಾಸನೆ' ಅಂಕಣದಲ್ಲಿ ಕಂಡ ಒಂದು ನಿರ್ದಿಷ್ಟ ಪರಿಕಲ್ಪನೆಯೊಂದಿಗೆ ಲೇಖನಗಳನ್ನು ನೀಡಲಾಗುತ್ತದೆ. ಗಾಂಧೀಜಿ ಸತ್ಯ, ಅಹಿಂಸೆ, ತ್ಯಾಗ, ಸರಳತೆ ಎಂಬ ಆದರ್ಶಗಳೊಂದಿಗೆ ಮೌಲ್ಯಾಧಾರಿತ ಬದುಕನ್ನು ನಡೆಸಿದವರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ತಮ್ಮ 'ಸತ್ಯಾಗ್ರಹ'ವೆಂಬ ಅಸ್ತ್ರದಿಂದ ಹೋರಾಟಕ್ಕೆ ಹೊಸದೊಂದು ರೂಪವನ್ನು ನೀಡಿ ಅದ್ಭುತವಾದ ಫಲಿತಾಂಶವನ್ನು ತಂದವರು. ಜನರಲ್ಲಿ ದೇಶಪ್ರೇಮದ ಹೊಳೆಯನ್ನು ಹರಿಸುವುದರೊಂದಿಗೆ ಅವರಲ್ಲಿ ಬೆಳೆದುಬಂದಿದ್ದ ಮೂಢನಂಬಿಕೆಯ ಅನೇಕ ಅಂಶಗಳನ್ನು ಹೋಗಲಾಡಿಸಿದವರು. 'ರಾಷ್ಟ್ರಪಿತ'ನೆಂಬ ಅಭಿದಾನವನ್ನು ಪಡೆದುಕೊಂಡ ಹಿರಿಮೆ ಅವರದು.)**

**ಈ ಎಲ್ಲ ಪೀಠಿಕೆಯೊಂದಿಗೆ ಪ್ರಸ್ತುತ ಅಂಕಣದಲ್ಲಿ ನೀತಿ ಪ್ರಧಾನವಾದ ಕಥೆಗಳ ಮೂಲಕ ಜನರಲ್ಲಿ ಮೌಲ್ಯಗಳ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ.**

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಒಂದೂರಿನಲ್ಲಿ ಒಬ್ಬ ಅರಸನಿದ್ದ. ಉತ್ತಮವಾದ ರೀತಿಯಲ್ಲಿ ಆಡಳಿತ ನಡೆಸುತ್ತ ಜನಾನುರಾಗಿಯೆನಿಸಿಕೊಂಡಿದ್ದ. ಅವನಿಗೆ ಸಹಾಯಕರಾಗಿ ಒಳ್ಳೆಯ, ಬುದ್ಧಿವಂತ ಮಂತ್ರಿಗಳೂ ಇದ್ದರು. ಒಮ್ಮೆ ಆ ರಾಜನಿಗೆ ಒಂದು ಪ್ರಶ್ನೆ ಕಾಡಿತ್ತು. ತನ್ನ ಆಡಳಿತವನ್ನು ಇನ್ನೂ ಸುಧಾರಿಸಿಕೊಳ್ಳಬೇಕಾದರೆ ಆ ಪ್ರಶ್ನೆಗೆ ಉತ್ತರ ಬೇಕೆನಿಸಿತ್ತು. 'ನಾವು ಯಾರನ್ನು ಮುಖ್ಯ ವ್ಯಕ್ತಿಯೆಂದು ಪರಿಗಣಿಸಬೇಕು? ನಮ್ಮ ಬದುಕಿನಲ್ಲಿ ಯಾವ ಕೆಲಸ ಮುಖ್ಯವೆನಿಸಿಕೊಳ್ಳುತ್ತದೆ? ಮುಖ್ಯ ಸಮಯ/ಕಾಲ ಯಾವುದಾಗುತ್ತದೆ?' ಇದು ಅವನ ಸಮಸ್ಯೆಯಾಗಿತ್ತು. ಆಸ್ಥಾನದಲ್ಲಿ ಅನೇಕ ಉತ್ತರಗಳು ಬಂದುವು. ಒಬ್ಬ ಅನ್ನದಾತನಾದ 'ರೈತ'ನೇ ಮುಖ್ಯವ್ಯಕ್ತಿಯೆಂದರೆ ಮತ್ತೊಬ್ಬ ದೇಶ ಕಾಯುವ 'ಸೈನಿಕ' ಮುಖ್ಯನೆಂದು ಹೇಳಿದ್ದ. ಇನ್ನೊಬ್ಬ ಜ್ಞಾನಿಯೆನಿಸಿಕೊಳ್ಳುವ 'ಜ್ಯೋತಿಷಿ'ಯೇ ಮುಖ್ಯ ವ್ಯಕ್ತಿಯೆನಿಸಿಕೊಳ್ಳುತ್ತಾನೆಂದಿದ್ದ. ಅವರವರಿಗೆ ಸಂಬಂಧಿಸಿದಂತೆ ಕಾಲ, ಕೆಲಸ ಕೂಡ ಯೋಚಿಸಿ ಹೇಳಿದ್ದರು. ಆದರೆ ರಾಜನಿಗೆ ಯಾವುದೂ ಸಮಾಧಾನ ತರಲಿಲ್ಲ. ಕಡೆಗೆ ಮಂತ್ರಿ ಒಂದು ಸಲಹೆ ನೀಡಿದ. ಊರಾಚೆಯಿರುವ ಬಯಲಿನಲ್ಲಿ ಗುಡಿಸಲು ಹಾಕಿಕೊಂಡು ವಾಸಿಸುತ್ತಿರುವ ಸನ್ಯಾಸಿಯು ಬಹಳ ಜ್ಞಾನಿಯೆಂದು ಜನರು ಹೇಳುತ್ತಾರೆಂದೂ ಅವನನ್ನು ಕೇಳಿದರೆ ರಾಜನ ಪ್ರಶ್ನೆಗೆ ಉತ್ತರ ಸಿಕ್ಕಬಹುದೆಂಬುದೇ ಆ ಸಲಹೆಯಾಗಿತ್ತು.

ಮಂತ್ರಿಯ ಮಾತಿಗೆ ಒಪ್ಪಿದ ರಾಜನು ಮಾರನೇ ದಿನ ವೇಷ ಮರೆಸಿಕೊಂಡು ಒಬ್ಬ ಅಂಗರಕ್ಷಕನನ್ನು ಮಾತ್ರ ಜೊತೆ ಮಾಡಿಕೊಂಡು ಆ ಸನ್ಯಾಸಿಯನ್ನು ಕಾಣಲು ಹೊರಟನು. ಸನ್ಯಾಸಿಯ ಗುಡಿಸಲನ್ನು ಸಮೀಪಿಸಿದಾಗ ಆತನು ಭೂಮಿಯನ್ನು ಹದಮಾಡಲು ನೆಲವನ್ನು ಅಗೆಯುತ್ತಿದ್ದುದನ್ನು ಕಂಡನು. ಅವನ ಬಳಿಗೆ ರಾಜನು ಹೋದರೂ ಆತ ತನ್ನ ಕೆಲಸವನ್ನು ನಿಲ್ಲಿಸಲಿಲ್ಲ. ತನ್ನಷ್ಟಕ್ಕೆ ಮಾಡುತ್ತಲೇ ಇದ್ದನು. ರಾಜನು ಹತ್ತಿರಕ್ಕೆ ಹೋಗಿ ತನ್ನ ಮೂರು ಪ್ರಶ್ನೆಗಳನ್ನು ಕೇಳಿ, ಜ್ಞಾನಿಯಾದ ಸನ್ಯಾಸಿಯು ತನಗೆ ಉತ್ತರಿಸಿ 'ಸಮಾಧಾನ' ಹೇಳಬೇಕೆಂದು ಪ್ರಾರ್ಥಿಸಿಕೊಂಡನು. ಆಗಲೂ ಅವನು ಮೌನವಾಗಿಯೇ ಕೆಲಸ ಮಾಡುತ್ತಿದ್ದನು. ಸ್ವಲ್ಪ ಹೊತ್ತು ರಾಜನೂ ಸುಮ್ಮನೆ ಕುಳಿತನು. ಸನ್ಯಾಸಿಯು ಆಯಾಸಗೊಂಡಿರಬಹುದೆನಿಸಿ, "ಸ್ವಾಮಿ, ನಾನು ಸ್ವಲ್ಪ ಹೊತ್ತು ನಿಮ್ಮ ಕೆಲಸವನ್ನು ಮಾಡುತ್ತೇನೆ. ನೀವು ವಿರಮಿಸಿಕೊಳ್ಳಿ" ಎಂದು ರಾಜನು ಹೇಳಿದಾಗ ಮೌನವಾಗಿಯೇ ತಾನು ಅಗೆಯುತ್ತಿದ್ದ ಪಿಕಾಸಿಯನ್ನು ಅವನಿಗೆ ಕೊಟ್ಟು ಸನ್ಯಾಸಿಯು ಗುಡಿಸಿಲಿನ ಒಳಗೆ ಹೋದನು.

ರಾಜನು ಸ್ವಲ್ಪ ಹೊತ್ತು ನೆಲವನ್ನು ಅಗೆಯುತ್ತಿದ್ದಾಗ ಸನ್ಯಾಸಿಯು ಹೊರಬಂದು ಕುಳಿತನು. ಅಷ್ಟರಲ್ಲಿಯೇ ದೂರದಲ್ಲಿ ಒಬ್ಬ ಮನುಷ್ಯನು ಓಡಿ ಬರುತ್ತಿರುವುದು ಕಂಡಿತು. ಅವನು ಹತ್ತಿರ ಬಂದಂತೆ ಅವನ ಮೈಕೈಯಲ್ಲಿ ಗಾಯವಾಗಿ ರಕ್ತ ಸುರಿಯುತ್ತಿರುವುದೂ ಕಂಡಿತು. ಕೂಡಲೇ ಸನ್ಯಾಸಿಯು ಆ ಮನುಷ್ಯನನ್ನು ಉಪಚರಿಸಲು ನೆರವಾಗುವಂತೆ ರಾಜನಿಗೆ ಹೇಳಿ, ನಂತರ ಇಬ್ಬರೂ ಸೇರಿ ಅವನನ್ನು ಗುಡಿಸಲಿನ ಒಳಗೆ ಕರೆದುಕೊಂಡು ಹೋಗಿ ಮಲಗಿಸಿದರು. ಸನ್ಯಾಸಿಯು ಹೊರಗೆ ಹೋಗಿ ಯಾವುದೋ ಗಿಡದ ಎಲೆಗಳನ್ನು ಕಿತ್ತು ತಂದು ಅದರ ರಸವನ್ನು ತೆಗೆದು ಗಾಯುಗಳಿಗೆಲ್ಲ ಹಚ್ಚಿ, ಕುಡಿಯುಲು ಯಾವುದೋ ಕಷಾಯವನ್ನು ಮಾಡಿಕೊಟ್ಟು ಸ್ವಲ್ಪ ಹೊತ್ತು ನಿದ್ರಿಸುವಂತೆ ಹೇಳಿ, ರಾಜನಿಗೂ ಊಟದ ವ್ಯವಸ್ಥೆ ಮಾಡಿಕೊಟ್ಟು ತಾನು ಎಲ್ಲಿಯೋ ಹೊರಗೆ ಹೊರಟು ಹೋದನು. ಊಟದ

ಪುಟ 9 ಕ್ಕೆ ➢

**ಮೂಢನಂಬಿಕೆಯಲ್ಲ ಇದು ಮೂಲ ನಂಬಿಕೆ**

# ಭಾರತೀಯ ಸಂಸ್ಕೃತಿಯಲ್ಲಿ ಕುಂಕುಮದ ಮಹತ್ವ

ಶ್ರೀಮತಿ ಸುನೀತಾ ಗಂಗಾಧರ್
ರಾಮನಗರ



ಭಾರತೀಯ ಸನಾತನ ಸಂಸ್ಕೃತಿಯು ಪ್ರಪಂಚದಲ್ಲೇ ಹೆಸರು ವಾಸಿಯಾದ ಪುರಾತನ ಹಾಗೂ ವೈವಿಧ್ಯತೆಯಿಂದ ಕೂಡಿದ ಅಚ್ಚರಿಯ ಖನಿಜವಾಗಿದ್ದು ಭಾರತದ ನೆಲದಲ್ಲಿ ಅತ್ಯಂತ ಆಳವಾಗಿ ಘನಿಭವಿಸಿದ್ದನ್ನು ನಾವು ಕಾಣಬಹುದು.

ನಮ್ಮ ಪೂರ್ವಜರು, ಋಷಿಮುನಿಯರು ತಮ್ಮ ಜೀವನದುದ್ದಕ್ಕೂ ಕಂಡುಕೊಂಡ ಸತ್ಯಗಳೇ ಸಂಸ್ಕೃತಿ, ಸಂಸ್ಕಾರ, ಮೌಲ್ಯ ಮತ್ತು ಜೀವನ ಕ್ರಮಗಳಾಗಿವೆ.

ನಮ್ಮ ದೈನಂದಿನ ಆಚರಣೆಯಲ್ಲಿ ಹಿರಿಯರು ತಾವು ಅನುಸರಿಸಿ ಚಿಕ್ಕವರಿಗೂ ಆ ನಂಬಿಕೆ, ಶ್ರದ್ಧೆ ರಕ್ತಗತವಾಗುವಂತೆ ಬೆಳಸುತ್ತಾರೆ. ಬದಲಾದ ಕಾಲಘಟ್ಟದಲ್ಲಿ ಈ ನಂಬಿಕೆ, ಶ್ರದ್ಧೆಗಳೇ ತೀಕ್ಷ್ಣ ವಿಮರ್ಶೆಗೆ ಒಳಪಡುತ್ತಾ ಇದೆ.

ಪರಂಪರಾಗತ ವಿಚಾರಗಳು ಯಾವುವೂ ಅಬೌದ್ಧಿಕ, ಅತಾರ್ಕಿಕವಲ್ಲ. ಅಮೃತತುಲ್ಯ ಜೀವನಾನುಭವದ ವಿಚಾರಗಳು ಮಾನವನ ಔನ್ನತ್ಯೆಗೆ ಸಹಾಯ ನೀಡಿರುವುದು ನಿಸ್ಸಂಶಯ.

ನಮ್ಮಲ್ಲಿ ಹಲವು ಆಚರಣೆಗಳು ಪ್ರಚಲಿತವಿದ್ದು ಪೂಜೆಯು ಸಹಾ ಅದರ ಒಂದು ಭಾಗ. ಅತ್ಯಂತ ಭಕ್ತಿ, ಶ್ರದ್ಧೆಯಿಂದ ಆಚರಿಸಲ್ಪಡುವ ಈ ಕಾರ್ಯದಲ್ಲಿ ಅತೀ ಶ್ರೇಷ್ಠತಮವಾದ ವಸ್ತುಗಳಿವೆ. ಇಲ್ಲಿ ಆಯ್ದು ಶ್ರೇಷ್ಠವಸ್ತುಗಳ ಹಿನ್ನೆಲೆ ಗಮನಿಸಿದರೆ ನಿಮಗೆ ಸೂಜಿಗವೆನಿಸದಿರದು. ಆಯಾ ಸ್ಥಳದಲ್ಲಿ ಮಾನವನಿಗೆ ಅನುಕೂಲವಾಗುವ ದೈವಿಭಾವಕ್ಕೂ ಸಮರ್ಪಣೆ ಆಗುವ ರೀತಿಯ ಪದಾರ್ಥಗಳನ್ನು ಇಲ್ಲಿ ಬಳಸಲು ಆರಿಸಲಾಗಿದೆ. ಉದಾ ಕುಂಕುಮ, ಚಂದನ, ಅರಿಶಿಣ, ಪುಷ್ಪ, ಹಾಲು ಇತ್ಯಾದಿ.

ಕುಂಕುಮ ಹೆಸರು ಕೇಳದವರು ಅತೀ ವಿರಳ ಸಂಖ್ಯೆಯಲ್ಲಿರಬಹುದು. ಏಕೆಂದರೆ ಕುಂಕುಮಕ್ಕೆ ಅಷ್ಟೊಂದು ಮಹತ್ವದ ಸ್ಥಾನವನ್ನು ಹಿರಿಯರು ನೀಡಿದ್ದಾರೆ. ಕುಂಕುಮವನ್ನು 'ಸೌಭಾಗ್ಯ' ಸೂಚಕವಾಗಿ ದೇವತಾರಾಧನೆಯ ಕೈಂಕರ್ಯಕ್ಕಾಗಿ ಹಿಂದೂ ವಿವಾಹಿತ ಸ್ತ್ರೀಯರು ಸೌಮಂಗಲ್ಯ ಸೂಚಕವಾಗಿ ಹಣೆಗೆ ಧರಿಸುವ ಆಚರಣೆಯಿದೆ.

ಕುಂಕುಮ ಅಥವಾ ಸಿಂಧೂರವನ್ನು ಅರಿಶಿಣ ಸುಣ್ಣ ಹಾಗೂ ಪಾದರಸದ ಲೋಹಗಳನ್ನು ಸೇರಿಸಿ ತಯಾರಿಸುತ್ತಾರೆ. ಮಂಗಳ ದ್ರವ್ಯವೆಂದು ಕರೆಯಲ್ಪಡುವ ಕುಂಕುಮ ಬಳಕೆಗೆ ಕಾರಣ ಯಾವ ನಂಬಿಕೆ ಇದೆಯೆಂದರೆ ಚಿಕ್ಕ ವಯಸ್ಸಿನಲ್ಲಿ ವಿದ್ಯೆ ಹಾಗೂ ಶೋಭೆಗಾಗಿ ಹಣೆಗೆ ಕುಂಕುಮವನ್ನಿಟ್ಟರೆ, ವಿವಾಹಿತ ಸ್ತ್ರೀ ಪತಿಯ ಶ್ರೇಯಸ್ಸು ಹಾಗೂ ದೀರ್ಘಾಯಶ್ಯಕ್ಕಾಗಿ ಇಡುವರು. ಪುರುಷರು ಪ್ರಾಮಾಣಿಕತೆ, ಮನಸ್ಸಿನ ಸಂಕಲ್ಪ ಸಿದ್ಧಿ ಹಾಗೂ ಶಾಂತಿ ಸಮೃದ್ಧಿಗಾಗಿ ಹಣೆಯಲ್ಲಿ ತಿಲಕವಿಡುತ್ತಾರೆ.

ಇನ್ನು ವಿಚಾರವಂತರಿಗೆ ಇದರ ಹಿಂದಿನ ವೈಜ್ಞಾನಿಕತೆಯನ್ನು ಈ ರೀತಿ ವಿವರಿಸಬಹುದು. ಎರಡೂ ಹುಬ್ಬುಗಳ ಮಧ್ಯದಲ್ಲಿ ಚಿಂತನ ಹೆಚ್ಚಿಸುವುದರ ಜೊತೆಗೆ ಮನಸಿನ ಭಾವನೆಗಳ ಕ್ರೂಡೀಕರಣಗೊಳ್ಳುವ ಸ್ಥಾನವೂ ಹೌದು. ಕುಂಕುಮವನ್ನು ಭೂಮಧ್ಯದಿಂದ ಪಿಟ್ಯುಟರಿ ಗ್ರಂಥಿಯವರೆಗೂ ಹಚ್ಚಿಕೊಂಡರೆ ಒಳ್ಳೆಯದು. ಏಕೆಂದರೆ ಕುಂಕುಮದಲ್ಲಿನ ಪಾದರಸವು ಒತ್ತಡ ಮತ್ತು ಆಯಾಸವನ್ನು ಹೊಡೆದೋಡಿಸುವ ಸಾಮರ್ಥ್ಯ ಹೊಂದಿದ್ದು, ಸ್ವಾಭಾವಿಕವಾಗಿ ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ.

ಹಿರಿಯರು ಮುಂಬರುವ ಪೀಳಿಗೆಗಾಗಿ ನಿಸ್ವಾರ್ಥತೆಯಿಂದ ದೈವಿಭಕ್ತ ಸಂಪನ್ನತೆಯೊಂದಿಗೆ ಕಂಡು ಕೊಂಡ ಸತ್ಯವಿದು. ದೇವ ಆರಾಧನೆಗೆ ಕೆಂಪು ಸಿಂಧೂರವನ್ನು ಭಕ್ತಿಯ ಉಜಾಗರಣೆಯಾಗಿ ಆ ದೇವರ ಸಂಪ್ರೀತಿಗಾಗಿ ಕುಂಕುಮ ಸಹಸ್ರಾರ್ಚನೆ, ಕುಂಕುಮದ ಅಲಂಕಾರ ಇತ್ಯಾದಿ ಮಾಡಿ ತನ್ನಲ್ಲಿನ ಮುಗ್ಧ ದೈವಿ ಭಾವನೆಯನ್ನು ಸದಾ ಜಾಗೃತಗೊಳಿಸಿಕೊಂಡಿದ್ದಾರೆ.

ಭಾರತೀಯರಿಗೆ ಕುಂಕುಮ ಕೇವಲ ಬಣ್ಣವಲ್ಲ, ಪುಡಿಯಲ್ಲ. ಯಾವುದೇ ಸಮಾರಂಭವಿರಲಿ ಮದುವೆ, ಮುಂಜಿ ಇನ್ನಿತರ ಕಾರ್ಯಕ್ರಮಗಳಿಗೆ ಆಹ್ವಾನ ನೀಡುವಾಗ ಹಾಗೂ ಆ ಕಾರ್ಯಕ್ಕೆ ಬಂದಾಗ ಅರಿಶಿಣ ಕುಂಕುಮದಿಂದಲೇ ಸ್ವಾಗತಿಸಲಾಗುತ್ತದೆ. ಹಬ್ಬ ಹರಿದಿನಗಳಲ್ಲಿ ಸ್ತ್ರೀಯರು ಅಕ್ಕ ಪಕ್ಕದ ಮಹಿಳೆಯರನ್ನು ಅರಿಶಿಣ ಕುಂಕುಮಕ್ಕೆ ಕರೆದು ಆದರಾತಿಥ್ಯ ನೀಡುವ ಮೂಲಕ ಸಾಮಾಜಿಕ ಬಾಂಧವ್ಯ ಗಟ್ಟಿಗೊಳಿಸುವಿಕೆಯ ಪರಿಚಯ ಮಾಡಿಸಿಕೊಡುತ್ತದೆ. ಹಿಂದೆ ರಾಜರಿಗೆ ಸೈನಿಕರುಗಳಿಗೆ 'ತಿಲಕ' ವಿಟ್ಟು ಶುಭಕೋರುತ್ತಿದ್ದರು. ಇಂದು ಪ್ರತಿ ಶುಭಕಾರ್ಯಗಳಲ್ಲಿ ಮಾತ್ರವಲ್ಲದೆ ಬಡವ ಬಲ್ಲಿದನೆನ್ನದೆ ಅವರ ನಡುವಿನ ಬಾಂಧವ್ಯ ಬೆಸೆಯುವಲ್ಲಿ ಕೂಡ ಇದರ ಪಾತ್ರ ಕಾಣಬಹುದು.

ಮೊದಲೇ ಹೇಳಿದಂತೆ ಕುಂಕುಮ ಬರೀ ಬಣ್ಣವಲ್ಲ. ಅದೊಂದು ಗರಿಮೆ, ಮರ್ಯಾದೆಯ ಪ್ರತೀಕ, ಭಕ್ತಿಯ ದ್ಯೋತಕ, ಸಮೃದ್ಧಿಯ ಸಂಕೇತ, ದುಷ್ಟತೆಯ ನಿವಾರಣೆಗಿರುವ ಸೌಭಾಗ್ಯದ ಪ್ರತೀಕ.

●

ವಿಶೇಷ ಜ್ಞಾನ

# ಓರಿಗಾಮಿ: ಕಾಗದ ಮಡಚುವ ಕೌಶಲ

■ ನಾರಾಯಣ ಬಾಬಾನಗರ
ವಿಜಯಪುರ

ನಿಮ್ಮ ಬಾಲ್ಯವನ್ನು ಒಂದು ಸಲ ನೆನಪಿನ ಚೌಕಟ್ಟಿನಲ್ಲಿ ತನ್ನಿ. ಮಳೆಗಾಲ ಬಂತೆಂದರೆ ಸಾಕು, ಮನೆಯ ಮುಂದೆ ಸಣ್ಣದಾಗಿ ಹರಿಯುವ ನೀರಿನಲ್ಲಿ ಕಾಗದದ ದೋಣಿ ತೇಲಿಸಿದ್ದು. ಕಾಗದದ ಹಾಳೆಯೊಂದನ್ನು ತೇಲುವ ವಿಮಾನವನ್ನಾಗಿಸಿದ್ದು? ಬಾಲ್ಯದ ಸವಿ ದಿನಗಳ ಜೊತೆ ಜೊತೆಗೆ ನಮ್ಮನ್ನು ಕಾಡುವ ಕಾಗದದ ಆಟಿಕೆಗಳಿವು.

ಹರಡಿಕೊಂಡ ಹಾಳೆಯೊಂದನ್ನು ಹಾಗೊಮ್ಮೆ, ಹೀಗೊಮ್ಮೆ ಮಡಚಿ ದೋಣಿಯಾಕಾರಕ್ಕೋ, ವಿಮಾನದ ಆಕಾರಕ್ಕೋ ತರುವ ಕಲೆಯೊಂದಿದೆ ಎಂದು ಬಾಲ್ಯದಲ್ಲಿ ನಾವು ತಲೆಕೆಡಿಸಿಕೊಂಡಿರಲಿಕ್ಕಿಲ್ಲ. ಆಟದ ಮುಂದೆ, ಬಾಲ್ಯದ ಮುಂದೆ ಅದೆಲ್ಲಿಯ ತರ್ಕ?


ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಜಾದೂ ಮಾಡುವವರು, ಪೇಪರ್ ಮಡಚಿ ವಿವಿಧ ಆಕೃತಿ ತಯಾರಿಸಿ ನಮ್ಮ ಕಣ್ಣುಗಳಲ್ಲಿ ಅಚ್ಚರಿ ಮೂಡಿಸುವವರು ಆಗಾಗ ಶಾಲೆಗೆ ಬರುತ್ತಿದ್ದರು. ಹಿಂದಿಯಲ್ಲಿ ಮಾತಾಡುತ್ತಿದ್ದ ವ್ಯಕ್ತಿಗಳು ಬರೀ ಬೆರಳುಗಳಿಂದ ಬಣ್ಣ ಬಣ್ಣದ ಕಾಗದಗಳನ್ನು ಜೋಡಿಸಿ ವಿವಿಧ ಪ್ರಾಣಿಗಳ ಆಕಾರವನ್ನು ಮಾಡಿ ತೋರಿಸುತ್ತಿದ್ದರು. ಅನಂತರ ಚಿಕ್ಕ ಪುಸ್ತಕವನ್ನು ಮಾರಾಟ ಮಾಡಿ ಹೋಗುತ್ತಿದ್ದರು. ಪುಸ್ತಕ ಓದಿಕೊಂಡು ಪೇಪರ್ ಮಡಚುವ ಪ್ರಯತ್ನ ಮನೆಯಲ್ಲಿ ನಡೆಯುತ್ತಿತ್ತು. ಆದರೆ ಸಫಲತೆ ಸಿಕ್ಕಿದ್ದು ಕಡಿಮೆ.

### ಕಾಗದಕ್ಕೆ ಮಡಿಕೆ ಹಾಕುವುದು ಎಲ್ಲಿಂದ ಶುರುವಾಯಿತು?

ಇತಿಹಾಸದ ಪುಟಗಳನ್ನು ಕಿತ್ತಾಡಿದರೆ ಈ ಕಲೆಯ ಮೂಲ ಜಪಾನವೆಂದು ಹೇಳುತ್ತದೆ. 'ಓರಿಗಾಮಿ' ಪದ ಮೂಲತಃ ಜಪಾನೀ ಭಾಷೆಯಾಗಿದ್ದು, ಅದರ ಅರ್ಥ–ಓರಿ ಎಂದರೆ ಮಡಚುವಿಕೆ, ಗಾಮಿ ಎಂದರೆ ಕಾಗದ. ಓರಿಕಾಮಿ ಇದ್ದದ್ದು ಓರಿಗಾಮಿ ಎಂದು ಕಾಲಾಂತರದಲ್ಲಿ ಪಾಠಾಂತರಗೊಂಡಿರಬಹುದು ಎಂಬುದು ಭಾಷಾ ತಜ್ಞರ ಅಂಬೋಣ.

ಇನ್ನೊಂದೆಡೆ 'ಓರಿಗಾಮಿ ಕಲೆ ಜಪಾನದಿಂದ ಬಂದದ್ದಲ್ಲ, ಅದು ಚೀನಾದ ಕೊಡುಗೆ' ಎಂತಲೂ ಕೆಲವರ ವಾದವಿದೆ. ಕಾಗದದ ತಯಾರಿಕೆ ಪ್ರಾರಂಭವಾದದ್ದೇ ಚೀನಾದಿಂದ ಎಂದ ಮೇಲೆ ಕಾಗದ ಮಡಚುವಿಕೆ ಚೀನಾದಿಂದಲೇ ಪ್ರಾರಂಭವಾದದ್ದು ಎಂಬುದು ಅವರ ತರ್ಕ.

ಆದರೆ ಜಪಾನದ ಪ್ರಾಚೀನ ಪುಸ್ತಕಗಳಲ್ಲಿ ಓರಿಗಾಮಿಯ ಬಗ್ಗೆ ಪ್ರಸ್ತಾಪಗಳಿರುವುದರಿಂದ ಅದು ಜಪಾನೀ ಕಲೆ ಎಂಬ ತೀರ್ಮಾನಕ್ಕೆ ಬರಲಾಗಿದೆ. ಜಪಾನದಲ್ಲಿನ ಕೆಲವು ಆಚರಣೆಗಳಲ್ಲಿ ಮಡಚಿದ ಕಾಗದವನ್ನು ಸುಡುವ ಸಂಪ್ರದಾಯವಿದ್ದುದರ ದಾಖಲೆಗಳಿವೆ. ಹೀಗೆ ಜಪಾನ, ಚೀನಾ, ಯೂರೋಪ ಪ್ರದೇಶಗಳಿಂದ ಕಾಗದ ಮಡಚುವ ಕಲೆ ಪ್ರಾರಂಭವಾಯಿತು ಎಂದು ಹೇಳಬಹುದು.



### ಕಾಗದ ಮಡಚುವ ಕಲೆ

ಒಂದು ಕಾಗದದ ಹಾಳೆಯನ್ನು ಕತ್ತರಿಸದೇ, ಅಂಟು ಬಳಸದೇ ಬರೀ ಮಡಕೆಗಳಿಂದಲೇ ಎರಡು ಆಯಾಮದ, ಮೂರು ಆಯಾಮದ ಆಕೃತಿ ರೂಪಕ್ಕೆ ತರಬೇಕಾದರೆ ಅದಕ್ಕೆ ನಿಜವಾಗಿಯೂ ಕೈಚಳಕದ ಕುಶಲತೆ ಬೇಕೇ ಬೇಕು.


ಪ್ರಸ್ತುತ ದೋಣಿ, ವಿಮಾನದ ಆಕೃತಿಗಳಿಂದ ಬಹು ದೂರ ಸಾಗಿದೆ ಓರಿಗಾಮಿ. ಚಲಿಸಬಲ್ಲ, ರೋಬೋಟ್‌ಗಳಾಗಿ ನಿಲ್ಲಬಲ್ಲ, ಯಾವುದೋ ಒಂದು ಯಂತ್ರದ ಮಿನಿ ಮಾದರಿಯಾಗಬಲ್ಲ ಕಾಗದದ ಆಕೃತಿಗಳ ಜಗತ್ತು ಈಗ ವಿಸ್ತಾರವಾಗಿ ಹರಡಿಕೊಂಡಿದೆ. ಏನೇ ಆಕೃತಿ ಮಾಡಿದರೂ ಇರುವ ಮೂಲ ತತ್ತ್ವ – ಮಡಚುವಿಕೆ. ಮಡಚುವಿಕೆಯಲ್ಲಿಯೂ ಪ್ರಾರಂಭದ ಕೆಲವು ಮಡಿಕೆ ವಿಧಾನಗಳಿವೆ. ಓರಿಗಾಮಿಯಲ್ಲಿ ತೊಡಗಿಕೊಳ್ಳುವವರು ಈ ವಿಧಾನಗಳನ್ನು ಕಲಿಯಬೇಕಾಗುತ್ತದೆ. ಇತ್ತೀಚೆಗೆ ಕಾಗದಗಳ ಜೊತೆಗೆ ಪೇಪರ್ ಕ್ಲಿಪ್‌ದಂತಹ ಸಾಧನಗಳೂ ಬಳಕೆಯಾಗುತ್ತಿವೆ.

ಈ ಕಲೆ ಕಲಿಕೆಯ ಸಾಧನವಾಗಿ ಬಳಕೆಯಾಗುತ್ತಿದೆ. ಗಣಿತದ ಕಲಿಕೆಗೆ ಪರಿಣಾಮಕಾರಿಯಾದದ್ದು. ಅನೇಕ ಗಣಿತದ ಆಕೃತಿಗಳನ್ನು ಕಾಗದದಿಂದ ತಯಾರಿಸಿ ಅಮೂರ್ತ ಸಂಗತಿಗಳನ್ನು ಮೂರ್ತ ರೂಪಕ್ಕೆ ತರಬಹುದು. ಮಕ್ಕಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸಬಹುದು.

ಅಂಟು ಬಳಸದೇ ಕಾಗದ ಮಡಚಿ ಆಕೃತಿ ಮಾಡುವಲ್ಲಿಯೂ ಜಾಣ್ಮೆ ಅಡಗಿದೆ. ಓರಿಗಾಮಿಯ ಇನ್ನೊಂದು ರೂಪ ಕೀರಿಗಾಮಿಯೂ ಇದೆ. ಕತ್ತರಿಯಿಂದ ಕಾಗದವನ್ನು ಕತ್ತರಿಸಿ ಆಕೃತಿಯನ್ನು ಮಾಡುವ ವಿಧಾನವಿದು. ಮಕ್ಕಳಲ್ಲಿ ಹವ್ಯಾಸವಾಗಿ, ಪಠ್ಯಪೂರಕ ಚಟುವಟಿಕೆಯಾಗಿ ಓರಿಗಾಮಿ ಚಟುವಟಿಕೆಯುನ್ನು ಬೆಳೆಸುವುದು ಶಿಕ್ಷಕರ ಕ್ರಿಯಾಶೀಲತೆಯನ್ನು ಅವಲಂಬಿಸಿದೆ. ●

**ಮೊದಲು ಚಾರಿತ್ರ್ಯವನ್ನು ವೃದ್ಧಿಸಿ, ನೀವು ಮಾಡಬೇಕಾದ ಅತ್ಯುನ್ನತ ಕರ್ತವ್ಯ ಇದು.**

– ಸ್ವಾಮಿ ವಿವೇಕಾನಂದ



# ಗಾಂಧಿ ವಿಚಾರಧಾರೆಯನ್ನು ಪಾಲಿಸದವರು ಯಾರು?

**ಗಾಂಧೀಜಿಯವರು 1909 ರಲ್ಲಿ ಪ್ರಕಟಿಸಿದ 'ಹಿಂದಿ ಸ್ವರಾಜ್' ಈ ಮಣ್ಣಿನ ವಾಸನೆಯನ್ನು ಪಸರಿಸುವ ಪುಸ್ತಕ. ಆ ಸಾಮಾನ್ಯರ ಹೃದಯಕ್ಕೆ ತಟ್ಟುವ ವಿಚಾರ ಅದರಲ್ಲಿ ಅಡಕ, ಅದಕ್ಕೀಗ 110 ವರ್ಷ.**

**ಸಮಾಜ ಜೀವನದ ಹಲವು ಮುಖಗಳ ಬಗ್ಗೆ ಗಾಂಧೀಜಿ ಚಿಂತನೆ ನಡೆಸಿದ್ದರು. ಆ ಬಗ್ಗೆ ಅವರು ಖಚಿತ ಸ್ಪಷ್ಟ ನಿಲುವನ್ನು ಹೊಂದಿದ್ದರು. ವಿವಿಧ ವಿಷಯಗಳ ಬಗ್ಗೆ ಅವರ ನಿಲುವೇನಿತ್ತು? ಎಂಬುದನ್ನು ಅವರ ಮಾತುಗಳಲ್ಲೇ ತಿಳಿಯೋಣ.**

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



## ರಾಷ್ಟ್ರೀಯತೆ

ನಾವು ಒಂದು ದೇಶವಾಗಿರುವುದರಿಂದ ನಮ್ಮಲ್ಲಿ ಭೇದ–ಭಾವನೆಗಳು ಇರುವುದಿಲ್ಲವೆಂದು ನಾನು ಹೇಳಲಾರೆ. ನಮ್ಮ ಮುಂದಾಳುಗಳು ಭಾರತದಲ್ಲೆಲ್ಲಾ ಎತ್ತಿನ ಬಂಡಿಗಳಲ್ಲಾಗಲೀ, ಕಾಲ್ನಡಿಗೆಯಿಂದಾಗಲೀ ಸಂಚಾರ ಮಾಡುತ್ತಿದ್ದರು. ಒಬ್ಬರೊಬ್ಬರ ಭಾಷೆಯನ್ನು ಅವರು ಕಲಿತರು. ಅವರಲ್ಲಿ ಪ್ರತ್ಯೇಕತೆಯ ಮನೋಭಾವ ಇರಲಿಲ್ಲ. ದಕ್ಷಿಣದಲ್ಲಿ ರಾಮೇಶ್ವರ, ಪೂರ್ವದಲ್ಲಿ ಜಗನ್ನಾಥ, ಉತ್ತರದಲ್ಲಿ ಹರಿದ್ವಾರ ಇವು ತೀರ್ಥಕ್ಷೇತ್ರಗಳೆಂದೂ, ಯಾತ್ರಾಸ್ಥಳಗಳೆಂದೂ ಸ್ಥಾಪಿಸಿರುವಲ್ಲಿ ದೂರದೃಷ್ಟಿ ಇರುವ ನಮ್ಮ ಪೂರ್ವಜರ ಉದ್ದೇಶ ಏನಿತ್ತೆಂದು ತಿಳಿದಿರುವಿರಿ? ಅವರೇನೂ ಮೂರ್ಖರಾಗಿರಲಿಲ್ಲ. ಮನೆಗಳಲ್ಲಿಯೇ ದೇವರ ಪೂಜೆ ಮಾಡಬಹುದೆಂದು ಅವರಿಗೆ ತಿಳಿದಿತ್ತು. ಅಂತಃಕರಣ ಶುದ್ಧವಿರುವವರ ಮನೆಯಲ್ಲೇ ಗಂಗೆ ಇರುವಳೆಂಬುದನ್ನು ಅವರು ನಮಗೆ ಕಲಿಸಿದರು. ಆದರೆ ಭಾರತ ನಿಸರ್ಗ ಸ್ಪಷ್ಟವಾದ ಅವಿಭಕ್ತ ಭೂಮಿ ಎಂಬುದನ್ನು ಅವರು ಕಂಡರು. ಆದುದರಿಂದ ಅದು ಒಂದೇ ರಾಷ್ಟ್ರವಾಗಿರಬೇಕೆಂಬುದನ್ನು ಅವರು ಪ್ರತಿಪಾದಿಸಿದರು. ಹೀಗೆ ವಿವಿಧ ಭಾಗಗಳಲ್ಲಿ ಪವಿತ್ರ ಕ್ಷೇತ್ರಗಳನ್ನು ನಿರ್ಮಿಸಿದರು. ಬೇರೆ ದೇಶಗಳು ಅರಿಯದಂತಹ ರೀತಿಯಲ್ಲಿ ರಾಷ್ಟ್ರೀಯತ್ವದ ಕಲ್ಪನೆಯಿಂದ ಅವರು, ಜನರ ಮನಸ್ಸನ್ನು ಉಜ್ವಲಗೊಳಿಸಿದರು. ಹಿಂದೆ ನಾವು ಒಂದು ರಾಷ್ಟ್ರವಾಗಿರಲಿಲ್ಲ. ಒಂದು ರಾಷ್ಟ್ರವಾಗಲು ನಮಗೆ ಅನೇಕ ಶತಮಾನಗಳು ಬೇಕೆಂದು ಆಂಗ್ಲರು ನಮಗೆ ಕಲಿಸಿದರು ಎನ್ನುವುದಕ್ಕೆ ಯಾವುದೇ ಆಧಾರವಿಲ್ಲ. ಅವರು ಭಾರತಕ್ಕೆ ಬರುವ ಮುನ್ನವೇ ನಾವು ರಾಷ್ಟ್ರವಾಗಿದ್ದೆವು. ಒಂದೇ ವಿಚಾರ ನಮ್ಮನ್ನು ಪ್ರೇರೇಪಿಸುತ್ತಿತ್ತು. ನಮ್ಮ ಜೀವನ ಕ್ರಮವೂ ಒಂದೇ ಆಗಿತ್ತು.

ಇದು ಗಾಂಧಿಜೀಯವರ ನೂರು ವರ್ಷಗಳ ಹಿಂದಿನ ವಿಚಾರವಾದರೆ, ಸ್ವಾತಂತ್ರ್ಯಾ ನಂತರದ ಬುದ್ಧಿ ಜೀವಿಗಳು, ಮೆಕಾಲೆ ಮಾನಸ ಪುತ್ರರು– We are a nation in the making ಎಂದರು. ಭಾಷೆ ಆಧಾರದ ಮೇಲೆ ದೇಶ ಒಡೆದರು. ಗಡಿಗಾಗಿ, ನೀರಿಗಾಗಿ ಬಡಿದಾಡುವ ಸ್ಥಿತಿ ತಂದಿಟ್ಟರು.

**ಅಕ್ಟೋಬರ್ 2 ಗಾಂಧೀಜಿಯವರ ಹುಟ್ಟುಹಬ್ಬ. ಅವರು ಬದುಕಿದ್ದಿದ್ದರೆ ಅವರಿಗೆ ಪೂರ್ತಿ 150 ವರ್ಷ. ಅವರು ಹೇ ರಾಮ್ ಎಂದು ಹೇಳೀ 71 ವರ್ಷ ಕಳೆಯಿತು. ಗಾಂಧೀಜಿಯವರ ಆಚಾರಗಳ– ವಿಚಾರಗಳ ಬಗ್ಗೆ ಚರ್ಚಿಸಲು ಇದು ಸಕಾಲ.**

## ಸ್ವರಾಜ್ಯ

ನನ್ನ ಕನಸಿನ ಸ್ವಾತಂತ್ರ್ಯವೆಂದರೆ ರಾಮರಾಜ್ಯ ಅರ್ಥಾತ್ ಭೂಮಿಯ ಮೇಲೆ ದೇವರ ರಾಜ್ಯ ಸ್ವರ್ಗದಲ್ಲಿ ಯಾವ ರೀತಿ ಇದೆಯೋ ಅದು ನನಗೆ ಗೊತ್ತಿಲ್ಲ. ದೂರದ ದೃಶ್ಯವನ್ನು ಕಾಣುವ ಬಯಕೆ ನನಗಿಲ್ಲ. ಇಂದಿನ ಸ್ಥಿತಿ ಉತ್ತಮವಿದ್ದರೆ ಭವಿಷ್ಯವು ತೀರ ಭಿನ್ನವಾಗಿರದು. ರಾಮರಾಜ್ಯದಲ್ಲಿ ಪ್ರತಿಯೊಬ್ಬನಿಗೂ ಆರ್ಥಿಕ, ರಾಜಕೀಯ, ನೈತಿಕ ಸ್ವಾತಂತ್ರ್ಯವಿರಬೇಕು.

ಪುರಾತನ ರಾಮರಾಜ್ಯದ ಕಲ್ಪನೆಯು ನಿಜವಾದ ಪ್ರಜಾಸತ್ತೆಯೇ ಆಗಿತ್ತು. ಅದರಲ್ಲಿ ಅತ್ಯಂತ ಹೀನನಾದ ನಾಗರಿಕನೂ ತ್ವರಿತವಾದ ನ್ಯಾಯ ಪಡೆಯಬಹುದಿತ್ತು. ಅದಕ್ಕೆ ಅತ್ಯಂತ ಖರ್ಚಿನ ಹಾಗೂ ತೀರ ದೀರ್ಘವಾದ

ಪುಟ 8 ಕ್ಕೆ ➢

➢ ಪುಟ 3 ರಿಂದ..... ಗಾಂಧೀಜಿ ನಿಲುವು...

ಪ್ರಣಾಳಿಕೆಯಿರಲಿಲ್ಲ. ರಾಮರಾಜ್ಯದಲ್ಲಿ ಒಂದು ನಾಯಿಗೂ ನ್ಯಾಯ ದೊರೆಯುತ್ತಿತ್ತೆಂದು ಕವಿಗಳು ಹೇಳಿದ್ದಾರೆ. (ಯಂಗ್ ಇಂಡಿಯಾ)

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೋಟ್ಯಾವಧಿ ಜನತೆಗೆ ರಾಮರಾಜ್ಯದ ಕನಸು ಬಲಿದಾನಕ್ಕೆ ಪ್ರೇರಣೆ ನೀಡಿತ್ತು. ಒಮ್ಮೆ ಸ್ವಾತಂತ್ರ್ಯ ಬಂತೆಂದರೆ ರಾಮರಾಜ್ಯವು ಧರೆಗಿಳಿದೀತು ಎಂಬ ಭರವಸೆ ಇತ್ತು. ಆದರೆ 1947ರಲ್ಲಿ ರಾಜ್ಯ ಸೂತ್ರ ಹಿಡಿದವರಿಗೆ ರಾಮರಾಜ್ಯವೆಂದರೆ ಈ ನಾಡಿನ ಪರಂಪರೆ, ಸಂಸ್ಕೃತಿ, ಸಾಹಿತ್ಯ ಮುಂತಾದವುಗಳ ಪ್ರತೀಕ. ಅದಕ್ಕಾಗಿ ಅದು ಅಪಥ್ಯ. ಆದ್ದರಿಂದ ಸುಖಭೋಗದ ರಾವಣರಾಜ್ಯ ಪಥ್ಯ. ಹೀಗಾಗಿ ಗಾಂಧೀಜಿಯವರ ಅವರಂತೆ ಕೋಟ್ಯಾಂತರ ಜನರ ಕನಸಿನ 'ರಾಮರಾಜ್ಯ ಇಂದಿಗೂ ನನಸಾಗಿಲ್ಲ!

## ಸ್ವದೇಶಿ

"ಹಿಂದುಸ್ಥಾನವು 'ಸ್ವದೇಶಿ' ಎನ್ನುವ ಸ್ವರದಿಂದ ತುಂಬಿ, ಪ್ರತಿಯೋರ್ವನ ಕಿವಿಯಲ್ಲೂ ಈ ಸ್ವದೇಶಿ ಮಂತ್ರ ಮರುದನಿ ಗೊಂಡಾಗ ಹಿಂದುಸ್ಥಾನದ ಆರ್ಥಿಕ ಉದ್ಧಾರದ ಬೀಗದ ಕೈ ಇಲ್ಲಿನ ಕೋಟಿ ಕೋಟಿ ಜನರ ಕೈ ಸೇರಿತು" ಎಂದಿದ್ದರು ಗಾಂಧೀಜಿ. ಸ್ವಾತಂತ್ರ್ಯ ಹೋರಾಟದ ಆತ್ಮ ಸ್ವದೇಶಿ ಆಗಿತ್ತು.

ಸ್ವಾತಂತ್ರ್ಯ ಬಂದ ಕೂಡಲೇ, ಗಾಂಧೀಜಿ ಮಾನಸ ಪುತ್ರ ನೆಹರೂ ವಿದೇಶಿ ರೀತಿ ನೀತಿಗಳನ್ನು ಆಮದು ಮಾಡಿಕೊಂಡರು. ಇಂಗ್ಲೆಂಡ್– ರಷ್ಯಾ ಅವರಿಗೆ ಆದರ್ಶವಾಯಿತು. 60 ವರ್ಷಗಳ ನಂತರ ಇಂದು globalization ಹೆಸರಿನಲ್ಲಿ ಸ್ವದೇಶೀ ಮೂಲೆ ಗುಂಪಾಗಿದೆ.

'ಸ್ವದೇಶಿ'ಯ ಆತ್ಮ ಸ್ವಭಾಷೆ, ಈ ಮಣ್ಣಿನ ಭಾಷೆಯಲ್ಲಿ ಇಲ್ಲಿನ ಮಕ್ಕಳ ಶಿಕ್ಷಣ ನಡೆಯಬೇಕೆಂಬುದು ಅವರ ಮನದಾಳದ ಇಚ್ಛೆ. 'ಮಾತೃಭಾಷೆಯನ್ನು ಕಡೆಗಣಿಸಿ ನಮ್ಮ ವಿಚಾರ ಪ್ರಕಟಣೆಗೆ ಇಂಗ್ಲೀಷ್ ಬಳಸುವುದೆಂದರೆ ರಾಷ್ಟ್ರೀಯ ಆತ್ಮದ ಕೊಲೆಯಲ್ಲದೆ ಬೇರೆಯಲ್ಲ. ಇಂಥ ವಿಚಿತ್ರವನ್ನು ಜಗತ್ತಿನಲ್ಲಿ ನಾನೆಲ್ಲೂ ಕಾಣೆ' ಎಂದಿದ್ದರು ಗಾಂಧೀಜಿ. ಆದರೆ ಇಂದು, ಮಕ್ಕಳಿಗೆ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ನೀಡುವುದನ್ನು ರಾಜ್ಯದ ನ್ಯಾಯಾಲಯಗಳು ವಿರೋಧಿಸುತ್ತವೆ. ಎಂಥ ದುರ್ಗತಿ ಗಾಂಧೀಜಿಯವರ ವಿಚಾರಗಳಿಗೆ!

## ಗೋಸಂರಕ್ಷಣೆ

ನನ್ನ ದೃಷ್ಟಿಯಲ್ಲಿ ಗೋರಕ್ಷಣೆಯು ಸ್ವರಾಜ್ಯಕ್ಕಿಂತ ಕಡಿಮೆ ಮಹತ್ವದ್ದಲ್ಲ. ಕೆಲವೊಂದು ರೀತಿಯಲ್ಲಿ ಅದಕ್ಕಿಂತಲೂ ಹೆಚ್ಚೆಂದು ಪರಿಗಣಿಸುತ್ತೇನೆ. ನನ್ನ ಮಟ್ಟಿಗೆ ಗೋವಧೆ ಮತ್ತು ಮನುಷ್ಯ ವಧೆ ಒಂದೇ. (ಯಂಗ್ ಇಂಡಿಯಾ, 25–4–1925)

ನನ್ನ ಎಲ್ಲ ಪ್ರಯತ್ನವೂ ಗೋವಧೆಯನ್ನು ನಿಲ್ಲಿಸುವುದೇ ಆಗಿದೆ. ಹಸುವನ್ನು ಉಳಿಸಲು ಪ್ರಾಣ ಹೋಮ ಮಾಡಲಾರದವನು ಭಾರತೀಯ ಹೇಗಾದಾನು? (21.4.1921)

ಗಾಂಧೀಜಿಯವರ ಗ್ರಾಮರಾಜ್ಯದ ಕಲ್ಪನೆಯಲ್ಲಿ ಗೋವಿಗೆ ಪ್ರಧಾನ ಸ್ಥಾನ. "ಹಳ್ಳಿಗಳಲ್ಲಿ ಸರಕು ಸಾಗಣೆಗೆ ಬಸವಣ್ಣನೇ ಬೇಕು. ಇದು ನಮ್ಮ ಹಳ್ಳಿಯ ಜೀವನ ಮತ್ತು ಸಂಸ್ಕೃತಿಯ ಅಂಗ. ನಮ್ಮ ವಿಕೇಂದ್ರೀಕೃತ, ಗ್ರಾಮೋದ್ಯೋಗ ಪ್ರಧಾನವಾದ ಸಂಸ್ಕೃತಿಯನ್ನು ಕಾದುಕೊಳ್ಳಬೇಕಾದರೆ ಎತ್ತುಗಳ ಅಸ್ತಿತ್ವ ಅತ್ಯಂತ ಅವಶ್ಯವಾಗಿದೆ" ಎಂದು ಯಂಗ್ ಇಂಡಿಯಾದಲ್ಲಿ ಅಂದು ಬರೆದಿದ್ದರು.

ಇಂದು ಗೋರಕ್ಷಣೆಯ ಮಾತಾಡುವವರಿಗೆ ಪ್ರತಿಗಾಮಿಗಳು, ಜಾತಿವಾದಿಗಳು, ಮೂಲಭೂತವಾದಿಗಳು ಎಂಬ ಹಣೆ ಪಟ್ಟಿ ಸಿದ್ಧ. ಭಾರತದ ಒಂದೆರಡು ರಾಜ್ಯಗಳಲ್ಲಿ ಮಾತ್ರ ಗೋವಧೆ ನಿಷೇಧ ಕಾನೂನಿರುವುದು. ಮಿಕ್ಕೆಡೆ ಗೋವಿನ ಹತ್ಯೆ ನಿರಂತರ. ಪ್ರತಿ ಗೋವಿನ ಹತ್ಯೆಯಾದಾಗಲೂ ಗಾಂಧೀಜಿ ಆತ್ಮ ಕಣ್ಣೀರಿಡುತ್ತಿರಬಹುದು!

## ಸರಳತೆ

ಸರಳ ಜೀವನ ಎನ್ನುವುದು ಗಾಂಧೀಜಿಯವರ ಮತ್ತೊಂದು ಹೆಸರು. ತಮಿಳುನಾಡಿನ ಪ್ರವಾಸದಲ್ಲಿ ಅಲ್ಲಿನ ಜನರ ದಾರಿದ್ರ್ಯ ಕಂಡು, ಪೂರ್ಣ ಬಟ್ಟೆಯನ್ನು ತೊಡುವುದನ್ನೂ ತ್ಯಜಿಸಿ ತುಂಡು ಮುಂಡನ್ನು ಧರಿಸಲು ಪ್ರಾರಂಭಿಸಿದರು. ದುಂಡುಮೇಜಿನ ಪರಿಷತ್ತಿಗೆಂದು ಲಂಡನ್ನಿಗೆ ಹೋದಾಗ ಇದೇ ವೇಷದಲ್ಲೇ ಹೋದರು. ಹಾಗೆಯೇ ಅಲ್ಲಿನ ರಾಜನನ್ನು ಭೇಟಿಯಾದರು. ಅಂದಿನ ಪ್ರಧಾನಿ ಚರ್ಚಿಲ್, ಅವರನ್ನು 'ಅರೆಬೆತ್ತಲೆ ಫಕೀರ' ಎಂದು ಜರಿದರೆ, ಗಾಂಧೀಜಿ ಅದನ್ನು ತಮಗಿತ್ತ ಬಿರುದೆಂದೇ ಭಾವಿಸಿದರು.

ಇಂದು ಅವರ ಹೆಸರು ಹೇಳಿಕೊಳ್ಳುವ ಅವರ ಹಿಂಬಾಲಕರನ್ನು ನೋಡಿ, ಸರ್ಕಾರಿ ಬಂಗಲೆಗಳು, ಕಾರುಗಳು, ಆಳು ಕಾಳು ಹಿಂದಿನ ಯಾವ ರಾಜನಿಗೂ ಕಡಿಮೆ ಇಲ್ಲ ಇವರ ದರ್ಬಾರು! ಇವರು ಈ ನಾಡಿನ ಜನಸಾಮಾನ್ಯರ ಪ್ರತಿನಿಧಿಗಳು, ಇವರ ರಕ್ಷಣೆಗೆಂದೇ ನೂರಾರು ಕೋಟಿ ರೂಪಾಯಿ ಖರ್ಚು. ನಮ್ಮ ರಾಜ್ಯದ ಮುಖ್ಯಮಂತ್ರಿಯೊಬ್ಬರು ಇದ್ದ ಎರಡು ವರ್ಷದಲ್ಲೇ ತಮ್ಮ ಉಡುಪಿಗಾಗಿ ಲಕ್ಷಾಂತರ ರೂಗಳನ್ನು ಖರ್ಚು ಮಾಡಿದ್ದರಂತೆ! ಮಂತ್ರಿಯಾದ ಕೂಡಲೇ ವಿದೇಶಕ್ಕೆ ಹಾರಲೇಬೇಕು. ಅದೂ ಮಡದಿ ಮಕ್ಕಳ ಸಮೇತ! ಉಳಿಯಲು ನಕ್ಷತ್ರಗಳ ಹೋಟಲ್ಲೇ ಬೇಕು. ಭಾರತದ ಬಡ ಬೋರೇಗೌಡನ ತೆರಿಗೆ ಹಣ ನಾಚಿಕೆ ಇಲ್ಲದೆ ಖರ್ಚಾಗುತ್ತಿರುವುದನ್ನು ಕಾಣಲು ಸದ್ಯ ಗಾಂಧೀಜಿ ಬದುಕಿಲ್ಲವಲ್ಲ? ಅದೇ ಅವರ ಪುಣ್ಯ.

ಅಂದು ಗೋಡ್ಸೆ ಅವರ ಶರೀರವನ್ನಷ್ಟೇ ಕೊಂದ. ಆದರೆ ಈ 71 ವರ್ಷಗಳಲ್ಲಿ ಅವರ ವಾರಸುದಾರರು, ಅವರ ಹೆಸರಿನ ಜಪವನ್ನು ಎಲ್ಲಾ ಚುನಾವಣೆಗಳಲ್ಲಿ ಮಾಡುವವರು ಗಾಂಧೀಯವರ ರಾಮರಾಜ್ಯವಾಗಲೀ, ಸ್ವದೇಶೀ ಜೀವನ ವ್ಯವಸ್ಥೆಯಾಗಲೀ, ಗ್ರಾಮರಾಜ್ಯದ ಕಲ್ಪನೆಯಾಗಲೀ, ಗೋಸಂರಕ್ಷಣೆಯಾಗಲೀ, ಮಾತೃಭಾಷಾ ಶಿಕ್ಷಣವಾಗಲೀ, ಸರಳ ಜೀವನವಾಗಲೀ, ಮಧ್ಯಪಾನ ನಿಷೇಧವಾಗಲೀ, ಅವರ ಕಲ್ಪನೆಯ ಎಲ್ಲ ಕನಸುಗಳನ್ನು ಕೊಂದು ಹಾಕಿದ್ದಾರೆ. ಹಾಗಾದರೆ ನಿಜವಾಗಿ 'ಗಾಂಧಿಯನ್ನು ಕೊಂದವರಾರು? ●

➢ ಪುಟ 4 ರಿಂದ..... ಮುಖ್ಯ ವ್ಯಕ್ತಿ ...

ನಂತರ ಆಯಾಸಗೊಂಡಿದ್ದ ರಾಜನೂ ನಿದ್ರೆ ಹೋದನು. ಬೆಳಗಾಯಿತು, ಎಚ್ಚರಗೊಂಡ ರಾಜನು ಹೊರಡಲು ಸಿದ್ಧನಾಗಿ ಹೊರಗೆ ತನ್ನ ಕೆಲಸದಲ್ಲಿ ತೊಡಗಿದ್ದ ಸನ್ಯಾಸಿಯ ಬಳಿಗೆ ಹೋಗಿ "ಸ್ವಾಮಿ, ನಿನ್ನೆಯಿಂದಲೂ ತಾವು ನನ್ನ ಪ್ರಶ್ನೆಗೆ ಉತ್ತರ ಕೊಡಲೇ ಇಲ್ಲ. ಈಗ ನಾನು ಹೊರಡಬೇಕಾಗಿದೆ, ಈಗಲಾದರೂ ನನಗೆ ಉತ್ತರ ಹೇಳುವಿರಾ?" ಎಂದನು. ಆಗ ಸನ್ಯಾಸಿ 'ಉತ್ತರವನ್ನು ಈಗಾಗಲೇ ನೀಡಿದ್ದೇನೆ. ನೀನೂ ಅದನ್ನು ಅರ್ಥ ಮಾಡಿ ಕೊಂಡಿದ್ದೀಯಲ್ಲ?' ಎಂದನು. ಆಶ್ಚರ್ಯಗೊಂಡ ರಾಜನು, 'ಸ್ವಾಮಿ ನೀವು ನನಗೆ ಯಾವ ಉತ್ತರವನ್ನು ನೀಡಿಲ್ಲವಲ್ಲ, ಆ ಗಾಯಾಳುವಿನ ಉಪಚಾರ ಮಾಡುವಾಗಷ್ಟೇ ನನ್ನೊಡನೆ ನೀವು ಮಾತನಾಡಿದ್ದು ಮತ್ತೆ ನನಗೆಲ್ಲಿ ಉತ್ತರವನ್ನು ಹೇಳಿದ್ದೀರಿ?' ಎಂದನು. ಆಗ ಸನ್ಯಾಸಿ "ನೆನ್ನೆಯಿಂದ ನೀನು ಮಾಡಿದ ಕೆಲಸದಲ್ಲೇ ಉತ್ತರವನ್ನು ಕಂಡಿದ್ದೀಯೆ, ನೆನ್ನೆ ನೀನು ನನ್ನ ಬಳಿ ಉತ್ತರ ಕೇಳಲು ಬಂದಾಗ ನಿನಗೆ ನಾನೇ ಮುಖ್ಯ ವ್ಯಕ್ತಿಯೆನಿಸಿದ್ದೆ. ನಂತರ ನನ್ನ ಕೆಲಸದಲ್ಲಿ ನಾನು ಆಯಾಸಗೊಂಡಾಗ, ನೀನು ನನಗೆ ನೆರವಾಗಲು ಬಯಸಿ, ನನ್ನ ಕೆಲಸವನ್ನು ಮುಂದುವರಿಸಿದೆ. ಆಗ ನಿನಗೆ ನಿನ್ನ ಪ್ರಶ್ನೆಗಿಂತ ನನ್ನ ಕೆಲಸದಲ್ಲಿ ಸಹಕರಿಸುವುದೇ ಮಹತ್ತ್ವದ್ದಾಗಿ ಕಂಡಿತು. ಆಗ ನಿನಗೆ ಅದು ಮುಖ್ಯ ಕೆಲಸ ಮತ್ತು ಕಾಲವಾಯಿತು. ನಂತರ ಆ ಗಾಯಾಳು ಓಡಿ ಬಂದಾಗ ಅವನನ್ನು ಉಪಚರಿಸುವುದೇ ಮುಖ್ಯ ಕೆಲಸವಾಗಿ ಅವನೇ ಮುಖ್ಯ ವ್ಯಕ್ತಿಯೂ ಆದ. ಅವನಿಗೆ ಉಪಚರಿಸಿದ ಸಮಯವೇ ಮುಖ್ಯ ಕಾಲವೆನಿಸಿ, ಅವನ ಶುಶ್ರೂಷೆಯೇ ಮುಖ್ಯ ಕೆಲಸವಾಯಿತು. ಅಂದರೆ ಅವನಿಗೆ ಆಗ ಯಾರದಾದರೂ ಸಹಾಯ ಅಗತ್ಯವಾಗಿತ್ತು. ಅದಕ್ಕಿಂತ ಯಾವುದೂ ಮುಖ್ಯವಲ್ಲವೆಂದು ನಿನಗೆ ಕೂಡ ಅನಿಸಿ, ನೆರವು ನೀಡಲು ಮುಂದಾದೆ, ನಿನ್ನ ಪ್ರಶ್ನೆಗೆ ಉತ್ತರ ಪಡೆಯುವುದಕ್ಕಿಂತಲೂ ಅದು ಮುಖ್ಯವೆನಿಸಿತ್ತಲ್ಲವೇ? ಎಂದನು.

ಮತ್ತೆ ತನ್ನ ಉತ್ತರವನ್ನು ಸ್ಪಷ್ಟಪಡಿಸುತ್ತ "ಯಾವ ಕೆಲಸವನ್ನು ಯಾವಾಗ ಮಾಡಬೇಕೆಂಬುದನ್ನು ಸರಿಯಾಗಿ ಯೋಚಿಸಿ ಮಾಡಬೇಕು. ಅದು ಸಮಾಜಹಿತವಾಗಿರಬೇಕು, ಹಾಗೆ ಮಾಡುವಾಗ ಅದು ಮುಖ್ಯ ಕೆಲಸವೆನಿಸಿ ಯಾವ ವ್ಯಕ್ತಿಯು ಅದರ ಕೇಂದ್ರಬಿಂದುವಾಗಿರುತ್ತಾನೋ ಅವನೇ ಮುಖ್ಯವ್ಯಕ್ತಿಯೆನಿಸುತ್ತಾನೆ. ಆ ಕ್ರಿಯೆ ನಡೆಯುವುದೇ ಮುಖ್ಯ ಕಾಲವೂ ಆಗಿರುತ್ತದೆ. ಆದರೆ ಹಾಗೆ ಒಬ್ಬರಿಗಾಗಿ ಸಹಾಯ ಅಥವಾ ಕೆಲಸ ಮಾಡುವಾಗ ಆತ ಆ ಸಹಾಯಕ್ಕೆ ಯೋಗ್ಯನಾಗಿದ್ದಾನೆಯೇ, ಅದರ ಅಗತ್ಯ ಅವನಿಗಿದೆಯೇ ಎಂಬುದನ್ನು ಯೋಚಿಸಿ ಕಾರ್ಯಕ್ಕೆ ಮುಂದಾಗಬೇಕು. ಅಂದರೆ, ನೀನು ಮೊದಲು ನನ್ನ ಶ್ರಮವನ್ನು ಕಂಡು ಸಹಾಯಕ್ಕೆ ಬಂದಾಗ ನಿನಗೆ ನಾನು ಮುಖ್ಯವ್ಯಕ್ತಿಯಾದೆ. ನನಗೆ ನೆರವಾಗುವುದೇ ಮುಖ್ಯವಾಯಿತು. ಅದೇ ರೀತಿ ಗಾಯಾಳುವಿನ ವಿಚಾರದಲ್ಲಿಯೂ ಸಹ. ಹೀಗೆ ವ್ಯಕ್ತಿ, ಕೆಲಸ, ಕಾಲದ ಪ್ರಾಮುಖ್ಯ ಆಯಾ ಸನ್ನಿವೇಶಗಳನ್ನು ಅವಲಂಬಿಸಿರುತ್ತದೆ" ಎಂದನು. ರಾಜನಿಗೆ ಸಮಾಧಾನವಾಗಿ ನಮಸ್ಕರಿಸುತ್ತ ತಾನು ಆ ರಾಜ್ಯದ ಅರಸನೆಂದಾಗ ಅದು ತನಗೆ ಮೊದಲೇ ತಿಳಿದಿತ್ತೆಂದು ಸನ್ಯಾಸಿಯು ಹೇಳಿದಾಗ ಅಚ್ಚರಿಗೊಂಡನು.

ಅಷ್ಟರಲ್ಲಿ ಅದುವರೆಗಾಗಲೇ ಚೇತರಿಸಿಕೊಂಡು ಇಬ್ಬರ ಸಂಭಾಷಣೆಯನ್ನು ಕೇಳಿಸಿಕೊಂಡು ಹೊರಗೆ ಬಂದ ಗಾಯಾಳು ಇಬ್ಬರಿಗೂ ನಮಸ್ಕರಿಸಿ ರಾಜನಲ್ಲಿ ತನ್ನ ಕ್ಷಮಾಪಣೆಯನ್ನು ಕೇಳಿದನು. ಕಾರಣ ಕೇಳಿದ್ದಕ್ಕೆ "ಮಹಾರಾಜ, ನಾನು ನಿಮ್ಮನ್ನು ಕೊಲ್ಲಬೇಕೆಂದೇ ನಿಮ್ಮನ್ನು ಹಿಂಬಾಲಿಸಿ ಬರುತ್ತಿದ್ದೆ. ಏಕೆಂದರೆ ತಾವು ನನ್ನ ಅಣ್ಣನಿಗೆ ಸೇರಿದ್ದ ಭೂಮಿಯನ್ನು ವಶಪಡಿಸಿಕೊಂಡು ಅನ್ಯಾಯ ಮಾಡಿದಿರೆಂಬ ತಪ್ಪು ಕಲ್ಪನೆ ನನ್ನದಾಗಿತ್ತು. ಸೇಡು ತೀರಿಸಿಕೊಳ್ಳಲು ಬಯಸಿದ್ದೆ. ಸರಿಯಾಗಿ ಯೋಚಿಸಿರಲಿಲ್ಲ. ದಾರಿಯಲ್ಲಿಯೇ ನಿಮ್ಮ ಅಂಗರಕ್ಷಕ ನನ್ನನ್ನು ತಡೆದು ಆಕ್ರಮಣ ಮಾಡಿ ಗಾಯಗೊಳಿಸಿದ. ನೀವು ನನ್ನನ್ನು ಉಪಚರಿಸಿ ಜೀವದಾನ ಮಾಡಿದಿರಿ. ನಿಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ನನ್ನನ್ನು ಕ್ಷಮಿಸಿ, ನಾನು ಬದುಕಿರುವವರೆಗೂ ತಮ್ಮ ಸೇವೆ ಮಾಡುತ್ತೇನೆ," ಎಂದ ಸಂತೋಷ ಮತ್ತು ಸಮಾಧಾನದಿಂದ ರಾಜನು ಅರಮನೆಗೆ ಹಿಂತಿರುಗಿ ತನ್ನ ಆಡಳಿತವನ್ನು ಮತ್ತೂ ದಕ್ಷತೆಯಿಂದ ನಡೆಸತೊಡಗಿದ. ●

# ರಾಮನಗರ, ಯಾದಗಿರಿ, ಬೆಂಗಳೂರು ನಗರ ದಕ್ಷಿಣ ಜಿಲ್ಲಾ ಪದಾಧಿಕಾರಿಗಳು

**ರಾಮನಗರ ಜಿಲ್ಲೆ :** ಅಧ್ಯಕ್ಷರು– ಶ್ರೀ ಸಿ.ವಿ ಜಯಣ್ಣ, ಪ್ರಧಾನ ಕಾರ್ಯದರ್ಶಿ– ಶ್ರೀ.ಬಿ ಚನ್ನೇಗೌಡ, ಖಜಾಂಚಿ– ಶ್ರೀ ಮಂಜುನಾಥ್, ಗೌರವ ಅಧ್ಯಕ್ಷರು– ಶ್ರೀ ಸಿದ್ಧರಾಜು, ಜಿಲ್ಲಾ ಸಂರಕ್ಷಕರು – ಶಿವಣ್ಣ, ಜಿಲ್ಲಾ ಮಹಿಳಾ ಪ್ರಮುಖ್– ಶ್ರೀಮತಿ ಸುಮಂಗಲ, ಸಂಘಟನಾ ಕಾರ್ಯದರ್ಶಿ– ಶ್ರೀ ಜಿ.ಕೆ ರಂಗನಾಥ್, ಉಪಾಧ್ಯಕ್ಷರು– ಶ್ರೀ.ಸಿ.ವಿ ವೆಂಕಟರಾಮು, ಶ್ರೀ. ಮಂಜುನಾಥ್, ಶ್ರೀ ಬಿ.ದೇವರಾಜಯ್ಯ ಕಾರ್ಯದರ್ಶಿ– ಶ್ರೀ ಕಾಡೇಗೌಡ, ಶ್ರೀ ಗೌರೀಶ, ಶ್ರೀ ವಿರೂಪಾಕ್ಷಯ್ಯ, ಶ್ರೀ ಹೆಚ್.ಎಸ್. ರಾಜಣ್ಣ, ಕಾರ್ಯಕಾರಿಣಿ ಸದಸ್ಯರು– ಶ್ರೀಮತಿ ವಿನೋದ, ಶ್ರೀ ಹೇಮಂತ ಕುಮಾರ್, ಶ್ರೀ ಹೊನ್ನಗಂಗಪ್ಪ, ಶ್ರೀಮತಿ ಸಿ.ಪಿ ಲತಾ, ಶ್ರೀ ಜಗನ್ನಾಥ.

**ಯಾದಗಿರಿ ಜಿಲ್ಲೆ :** ಜಿಲ್ಲಾ ಗೌರವ ಅಧ್ಯಕ್ಷರು – ಶ್ರೀ ಸುಧಾಕರ ಗುಡಿ, ಜಿಲ್ಲಾ ಅಧ್ಯಕ್ಷರು –ಶ್ರೀ ಅನಿಲ್ ಕುಮಾರ್‌ಬಿರಾದಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ– ಬಸವರಾಜ ಬಾನಾರ, ಖಜಾಂಚಿ– ಶ್ರೀ ಬಸನಗೌಡ ಪಾಟೀಲ, ಸಂಘಟನಾ ಕಾರ್ಯದರ್ಶಿ– ಶ್ರೀ ಲಿಂಗನಗೌಡ ಯದ್ರಾಮಿಜ, ಜಿಲ್ಲಾ ಉಪಾಧ್ಯಕ್ಷರು – ಶ್ರೀ ಹಣಮಂತರಾವ್ ಗೊಂಗ್ಲೆ, ಶ್ರೀ ಯಲ್ಲಪ್ಪ ಕಾಡ್ಲೂರ, ಶ್ರೀ ಭೀಮಣ್ಣ ಭೋಸಗಿ, ಜಿಲ್ಲಾ ಮಹಿಳಾ ಪ್ರಮುಖರು – ಶ್ರೀ ಸಂಗಮ್ಮ ನಾಗವಿ,, ಕಾರ್ಯದರ್ಶಿ – ಶ್ರೀ ಮುಶ್ತಾರ ಅಹ್ಮದ್, ಸಹ ಕಾರ್ಯದರ್ಶಿ – ಶ್ರೀ ಬಸವರಾಜ ಗೋಗಿ, ಶ್ರೀ ವೆಂಕಟೇಶ ಚಂದನಕೇರಿ, ಕಾರ್ಯಕಾರಿಣಿ ಸದಸ್ಯರು – ಶ್ರೀ ಶರಣಬಸವ ಗಜ್ಜಿನಮನಿ, ರುದ್ರಗೌಡ ಪಾಟೀಲ, ಸಹ ಸಂಘಟನಾ ಕಾರ್ಯದರ್ಶಿ– ಶ್ರೀ ನಾಗಣ್ಣ ಶಹಾಬಾದ.

**ಬೆಂಗಳೂರು ದಕ್ಷಿಣ ಜಿಲ್ಲೆ :** ಅಧ್ಯಕ್ಷರು– ಶ್ರೀ ಸುರೇಂದ್ರ ಬಿ.ಎ, ಪ್ರಧಾನ ಕಾರ್ಯದರ್ಶಿ– ಡಾ॥ ವೆಂಕಟರಮಣ ದೇವರ ಭಟ್ಟರು, ಗೌರವಾಧ್ಯಕ್ಷರು– ಶ್ರೀಮತಿ ಜಿ.ಎನ್. ವಾಸುಕಿ, ಉಪಾಧ್ಯಕ್ಷರು– ಶ್ರೀ ಆವಟಿ ಬಿ.ಜಿ, ಸಹ ಕಾರ್ಯದರ್ಶಿ – ಶ್ರೀ ವಿಜಯ ಕುಮಾರ, ಕೋಶಾಧ್ಯಕ್ಷರು – ಶ್ರೀಮತಿ ಮಾಯಾಪ್ರಭು, ಜಿಲ್ಲಾ ಮಹಿಳಾ ಪ್ರಮುಖ್– ಶ್ರೀಮತಿ ಧನಲಕ್ಷ್ಮಿ ●

**ಅವಿಸ್ಮರಣೀಯರು**
**ಭಾಗ-1**

# 'ನಾವು ಸತ್ತು, ದೇಶವನ್ನೆಬ್ಬಿಸೋಣ' ಎಂದಿದ್ದ ಆ 'ಹುಲಿ'!

**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



"ಒಂದು ವೇಳೆ ಜತೀಂದ್ರನ ಯೋಜನೆಗಳು ಫಲಿಸಿದ್ದಿದ್ದರೆ, ಗಾಂಧೀಜಿಯ ಆಗಮನಕ್ಕಿಂತ ಮುಂಚೆಯೇ ಭಾರತ ಸ್ವಾತಂತ್ರವಾಗುತ್ತಿತ್ತು ಮತ್ತು ರಾಷ್ಟ್ರಪಿತನ ಸ್ಥಾನ ಜತೀಂದ್ರನಿಗೆ ಸಲ್ಲುತ್ತಿತ್ತು." - ಹೀಗಂತ ಬರೆದಿದ್ದು ಜೆಕ್ ಮೂಲದ, ಅಮೇರಿಕಾದ ಪತ್ರಕರ್ತ ರಾಸ್. ಹೆದ್ವಿಸೆಕ್.

ಇಷ್ಟಕ್ಕೂ, ಹೀಗೆ ಬರೆದಿದ್ದು ಉತ್ಪ್ರೇಕ್ಷೆಯೇನು ಅಲ್ಲ. ಜತೀಂದ್ರನ ಆಲೋಚನೆಗಳೇ ಹಾಗಿದ್ದವು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ನಿರಂತರ ತುಡಿತ, ಅದ್ಭುತ ಬುದ್ಧಿಶಕ್ತಿ, ಬಾಹುಬಲ ಇವೆಲ್ಲದರ ಸಂಗಮವಾಗಿದ್ದವನು ಅವನು. ಸುಭಾಶರಿಗಿಂತಲೂ ಮೊದಲೇ, ಅನ್ಯ ದೇಶಗಳ ಸಹಾಯ ಪಡೆದುಕೊಂಡು ಭಾರತದ ನೆಲದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೇಳುವ ಮಹತ್ ಸಾಹಸಕ್ಕೆ ಕೈಹಾಕಿದ ಧೀರ..!!

ಜತೀಂದ್ರನಾಥ ಮುಖೋಪಾಧ್ಯಾಯ್ (ಮುಖರ್ಜಿ) ಬಂಗಾಳದ ಅಪ್ರತಿಮ ಕ್ರಾಂತಿಕಾರಿಗಳಲ್ಲಿ ಒಬ್ಬ. ಉಮೇಶಚಂದ್ರ ಮತ್ತು ಶರತ್ಶಶಿ ದಂಪತಿಗಳಿಗೆ ಡಿಸೆಂಬರ್ ಪೂರ್ವ ಬಂಗಾಲದ ಕೋಯಾ ಗ್ರಾಮದಲ್ಲಿ ಜನಿಸಿದನು. ಜತೀಂದ್ರ ವಿವೇಕಾನಂದರ ಆಶೀರ್ವಾದದೊಂದಿಗೆ, ಶ್ರೀಅರವಿಂದರ ಮಾರ್ಗದರ್ಶನದಲ್ಲಿ ಬೆಳೆದವನು. ಸಂಪೂರ್ಣ ಸಮಾಜ ಸೇವೆಯಲ್ಲಿಯೇ ತೊಡಗಿಸಿಕೊಂಡವನು ಈ ಜತೀನ್. ಬಾಲ್ಯದಲ್ಲಿ, ತಾಯಿ ಹೇಳುತ್ತಿದ್ದ ಮಹಾಭಾರತ, ರಾಮಾಯಣ, ಶಿವಾಜಿಯ ಚರಿತ್ರೆ ಇವನ್ನೆಲ್ಲ ಕೇಳಿ ಮಾನಸಿಕವಾಗಿ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡಿದ್ದ. ಶಿವಾಜಿಗೆ ತಾಯಿ ಭವಾನಿಯೇ ಬಂದು ಖಡ್ಗವನ್ನು ಕೊಟ್ಟ ಕಥೆಯನ್ನು ಕೇಳಿದ ಮೇಲಂತೂ, ತನಗೂ ಹಾಗೊಂದು ಖಡ್ಗ ಸಿಗಬಾರದೇ ಅಂತ ಹಂಬಲಿಸುತ್ತಿದ್ದ. ಒಮ್ಮೆ ಊರಿನ ಕಾಳಿಯ ಗುಡಿಯಲ್ಲಿ ಅಡ್ಡಾಡುವಾಗ, ಹರಕೆಗೆಂದು ಇಟ್ಟಿದ್ದ ಕೆಲವು ಕತ್ತಿಗಳು ಕಂಡವು. ತಾಯಿಯೇ ಅದನ್ನು ಅನುಗ್ರಹಿಸಿದಳೆಂದು ಅದರಲ್ಲಿನ ಒಂದನ್ನು ತಾನಿಟ್ಟುಕೊಂಡಿದ್ದ.

ಜತೀಂದ್ರನಿಗೆ 'ಬಾಘಾ ಜತೀನ್' ಎಂಬ ಹೆಸರೂ ಇದೆ. ಅದು ಬರಲು ಕಾರಣವೂ ಒಂದು ರೋಚಕ. ಆಗೆಲ್ಲ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲು ಕಾಲುನಡಿಗೆಯೇ ಇದ್ದದ್ದು. ಅದೂ ಕಾಡಿನ ದಾರಿಯ ಮಧ್ಯೆ. ಹೇಳಿ ಕೇಳಿ ಬಂಗಾಳದ ಪ್ರಾಂತ ಅದು. ಹುಲಿಗಳ ಪ್ರದೇಶ. ಇವನಿದ್ದ ಹಳ್ಳಿಯ ಸುತ್ತ ಒಂದು ಹುಲಿ ಆತಂಕ ಸೃಷ್ಟಿಸಿತ್ತು. ಅದೊಮ್ಮೆ, ಯಾವುದೇ ಕಾರ್ಯಕ್ಕೆ ಆ ಕಾಡಿನ ಮಾರ್ಗವಾಗಿ ಪಕ್ಕದ ಹಳ್ಳಿಗೆ ಹೋಗುವ ಅನಿವಾರ್ಯ ಸಂದರ್ಭ ಒದಗಿತು. ಅದೂ ರಾತ್ರಿಯಲ್ಲಿ. ಜತೀನ್ ತನ್ನ ಆ ಕತ್ತಿ, ಮತ್ತು ಅಂಜಿಪೇದೆ ಬಳಸುತ್ತಿದ್ದ ಗೆಜ್ಜೆಯ ಕೋಲನ್ನು ತೆಗೆದುಕೊಂಡು ಹೊರಟ. ಕಾಡಿನ ಮಧ್ಯೆ ಹೋಗುವಾಗ, ದೂರದಲ್ಲಿ ಎರಡು ಸಣ್ಣ ಮಿಣುಕು ದೀಪಗಳು ಕಂಡವು. ಯಾರೋ ದೀಪ ಹಚ್ಚಿಕೊಂಡು ಬರುತ್ತಿರಬೇಕೆಂದು ಭಾವಿಸಿದ. ಬರುಬರುತ್ತಾ ದೀಪ ಸಮೀಪ ಬಂದಂತೆ ಅನ್ನಿಸಿತು. ಪೂರ್ಣ ಹತ್ತಿರಕ್ಕೆ ಬಂದಾಗಲೇ ಅವನಿಗೆ ತಿಳಿದದ್ದು, ಅವು ದೀಪವಲ್ಲ, ಹುಲಿಯ ಕಣ್ಣುಗಳೆಂದು!! ಎದುರಿಗೆ, ನರಭಕ್ಷಕ ಹುಲಿಯನ್ನು ಕಂಡವನಿಗೆ ಹೇಗಾಗಿರಬೇಡ. ಹುಲಿ ಅವನ ಮೇಲೆರಗಿತು. ಅವನೂ ಅದರ ಮೇಲೆ ಪ್ರಹಾರ ಮಾಡಿದ. ಹುಲಿಯ ಪಂಜಿನ ಹೊಡೆತ ತಿಂದ ಮೇಲೆಯೂ ಕೊನೆಗೆ ಆ ಹುಲಿಯನ್ನು ಕೊಲ್ಲುವಲ್ಲಿ ಯಶಸ್ವಿಯಾದ. ಯಾರಿಂದಲೂ ಸಾಧ್ಯವಾಗದ ಹುಲಿಯ ಸಂಹಾರವನ್ನು ಜತೀಂದ್ರ ಮಾಡಿ ಮುಗಿಸಿದ್ದ. ಅಂದಿನಿಂದ 'ಬಾಘಾ ಜತೀನ್' ಎಂಬ ಬಿರುದು ಅಂಟಿಕೊಂಡಿತು. ನಂತರ, ಕಲ್ಕತ್ತೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಸ್ವಾಮೀ ವಿವೇಕಾನಂದರ ದರ್ಶನವಾಯಿತು. ಅಲ್ಲಿಂದ ಅವನ ಜೀವನ ಸಂಪೂರ್ಣ ರಾಷ್ಟ್ರಮಯ!

'ಆಲಿಪುರ ಬಾಂಬ್ ಪ್ರಕರಣ'ದ ನಂತರ, ಅರವಿಂದರ ಸಹೋದರ, ಬಾರೀಂದ್ರಕುಮಾರ್ ಘೋಷ್ ಶಿಕ್ಷೆಗೆ ಗುರಿಯಾದ ಮೇಲೆ, ಬಂಗಾಳದ "ಅನುಶೀಲನ ಸಮಿತಿ"ಯು, ಸಮರ್ಥ ನಾಯಕನಿಲ್ಲದೇ ಶಿಥಿಲವಾಗತೊಡಗಿತ್ತು. ಆಗ ಅರವಿಂದರ ಕಣ್ಣಿಗೆ ಬಿದ್ದವನೇ ಈ ಜತೀನ್. ತನ್ನ ಧೈರ್ಯ-ಸಾಹಸಗಳಿಂದ, ಅಪ್ರತಿಮ ದೇಶಭಕ್ತಿಯಿಂದ, ಎಲ್ಲರೊಡನೆ ಬೆರೆಯುವ ಸರಳತೆಯಿಂದ ಎಲ್ಲರಿಗೂ ಅಚ್ಚುಮೆಚ್ಚಿನವನಾದ್ದರಿಂದ, ಸಹಜವಾಗಿಯೇ ಉಳಿದೆಲ್ಲ ಯುವಕ್ರಾಂತಿಕಾರಿಗಳು, ಅವನ ನಾಯಕತ್ವಕ್ಕೆ ಸಮ್ಮತಿ ಸೂಚಿಸಿದರು. ಜತೀನ್ ಒಬ್ಬ ಅತ್ಯುತ್ತಮ ಸಂಘಟನಾಕಾರ. ಅಲ್ಲೊಂದು ಛಾತ್ರಭಂಡಾರ ಅನ್ನೋ ಅಂಗಡಿ ಇತ್ತು. ಅದೇ ಈ ಕ್ರಾಂತಿಕಾರಿಗಳ training center. ಅದು ನೋಡ್ಲಿಕ್ಕೆ ಒಂದು ಬಟ್ಟೆ ಅಂಗಡಿ, ಆದ್ರೆ ಅದರ ನೆಲಮಾಳಿಗೆಯಲ್ಲಿ ಪ್ರತಿನಿತ್ಯ ಕ್ರಾಂತಿಕಾರಿಗಳ ಸಭೆ ಸೇರ್ತಿತ್ತು. ಅಲ್ಲಿ ದಿನಾ ಉಪನ್ಯಾಸ ನೀಡುತ್ತಿದ್ದವನು ಈ ಜತೀನನೆ. ನಡೆಯುತ್ತಿದ್ದಿದ್ದು ಗೀತೆಯ ಉಪನ್ಯಾಸ. ಪ್ರತಿನಿತ್ಯ ಗೀತೆಯ ಶ್ಲೋಕಗಳನ್ನು ಮನನ ಮಾಡುತ್ತಾ, ಅದರ ಅರ್ಥವನ್ನು ರಾಷ್ಟ್ರೀಯವಾಗಿ ಮಾರ್ಪಡಿಸಿ, ಯುವಕರಲ್ಲಿ ದೇಶಭಕ್ತಿಯ ಕೆಚ್ಚನ್ನು ಮೂಡಿಸುವ ಚಾಕಚಕ್ಯತೆ ಜತೀನನಲ್ಲಿತ್ತು. 'ಆಮ್ರೋ ಮಾರ್ಬೋ, ಜಾತ ಜಾಗ್ಬೆ'- (ನಮ್ಮ ಆಹುತಿ, ರಾಷ್ಟದ ಜಾಗೃತಿ) ಎಂಬ ಘೋಷಣೆಯನ್ನು ಸಹ ಕ್ರಾಂತಿಕಾರಿಗಳ ಮಂತ್ರವನ್ನಾಗಿಸಿದ್ದ. ಹೀಗೆ 'ಅನುಶೀಲನ ಸಮಿತಿ'ಯನ್ನು ಮತ್ತೆ ಕಟ್ಟಿ, ಒಂದುಗೂಡಿಸಿದ್ದು ಕ್ರಾಂತಿಕಾರಿಗಳಲ್ಲಿ ನವಚೈತನ್ಯವನ್ನು ಮೂಡಿಸಿತ್ತು. ●

# "ಶಿಕ್ಷಣ ಮತ್ತು ಶಿಕ್ಷಕ" ಸಂವಾದ

## ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರೊಂದಿಗೆ



ದಿನಾಂಕ 23–9–2019 ರ ಸೋಮವಾರ ಬೆಳಗ್ಗಿನ ಸಮಯ 8.30 ರಿಂದ 10.00 ಗಂಟೆಗಳವರೆಗೆ ರಾಜ್ಯದ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಸುರೇಶ್ ಕುಮಾರರೊಂದಿಗೆ 'ಶಿಕ್ಷಣ ಮತ್ತು ಶಿಕ್ಷಕ' ವಿಷಯದ ಕುರಿತು ಚರ್ಚೆಯನ್ನು ಶಿಕ್ಷಕ ಸಂಘದ ಕೇಂದ್ರ ಕಛೇರಿ 'ಯಾದವಸ್ಮೃತಿ' ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಸರಿಯಾಗಿ 8.30 ಗಂಟೆಗೆ ಸರಸ್ವತಿ ವಂದನೆಯೊಂದಿಗೆ ಪ್ರಾರಂಭವಾಯಿತು. ವೇದಿಕೆಯಲ್ಲಿ ಹಾಜರಿದ್ದ ಪ್ರಮುಖರನ್ನು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಜಿಲ್ಲೆಯಿಂದ ಆಗಮಿಸಿದ ಪದಾಧಿಕಾರಿಗಳು ಮತ್ತು ಕಾರ್ಯದರ್ಶಿಗಳನ್ನು ಆತ್ಮೀಯವಾಗಿ ಶ್ರೀ ಗಂಗಾಧರಾಚಾರಿ, ರಾಜ್ಯ ಸಹ ಪ್ರಧಾನಕಾರ್ಯದರ್ಶಿ ಸ್ವಾಗತಿಸಿದರು. ಪ್ರಾಸ್ತಾವಿಕ ನುಡಿಯಲ್ಲಿ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ್ ಅವರು ಸಂಘದ ಹುಟ್ಟು, ಬೆಳವಣಿಗೆ ಹಾಗೂ ಕಾರ್ಯಕ್ಷಮತೆ, ನಡೆದು ಬಂದ ದಾರಿ ಕುರಿತು ಮಾನ್ಯ ಸಚಿವರಿಗೆ ತಿಳಿಸಿದರು. ಪಠ್ಯಪುಸ್ತಕ ಮತ್ತು ಶೈಕ್ಷಣಿಕ ಸವಾಲುಗಳು ಕುರಿತು ಶ್ರೀ ಶಿವಾನಂದ ಸಿಂಧನಕೇರಾ ಜೀ ಎ.ಬಿಆರ್.ಎಸ್.ಎಂ ನ ಪ್ರಧಾನ ಕಾರ್ಯದರ್ಶಿಗಳು ಸಚಿವರಿಗೆ ಸಂಕ್ಷಿಪ್ತವಾಗಿ ಮನವರಿಕೆ ಮಾಡಿಕೊಟ್ಟರು. ಈ ವರ್ಷ ಆಚರಿಸಲಾಗುವ ಗಾಂಧೀಜಿಯವರ 150ನೇ ಹುಟ್ಟುಹಬ್ಬದ ಮಹತ್ವತೆ ಮತ್ತು ಶಿಕ್ಷಕ ಸಂಘದ ಧ್ಯೇಯೋದ್ದೇಶಗಳು, ಸಂಘಕ್ಕೆ ಸರ್ಕಾರದ ಮಾನ್ಯತೆ ನೀಡುವ ಕುರಿತು ಶ್ರೀ ನಾಗಭೂಷಣ ಜೀ ತಿಳಿಸಿದರು.

ಮಾನ್ಯ ಶಿಕ್ಷಣ ಸಚಿವರಿಗೆ ನಮ್ಮ ಸಂಘದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾದ ಕೆಲವು ವಿಷಯಗಳ ಕುರಿತು ಮನವಿ ಸಲ್ಲಿಸಲಾಯಿತು.

- ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಸರ್ಕಾರದ ಮಾನ್ಯತೆ ನೀಡುವ ಕುರಿತು ಸಭೆಯಲ್ಲಿ ಅದರ ಮಹತ್ವ ಸಂಘದ 55 ವರ್ಷಗಳ ಸುದೀರ್ಘವಾದ ಕಾರ್ಯಕ್ಷೇತ್ರದ ಕುರಿತು ವಿಷಯ ಮಂಡಿಸಿದ ಶ್ರೀ ಮಹೇಶ ಬಸರಕೋಡ, ಕಲಬುರ್ಗಿ ವಿಭಾಗ ಪ್ರಮುಖ, ಸಚಿವರಿಗೆ ಮನವಿ ಸಲ್ಲಿಸಿದರು.
- 'ಶಿಕ್ಷಣ ಅದಾಲತ್' ಜಾರಿಗೆ ಮನವಿ– ಶ್ರೀಮತಿ ವಾಸುಕಿ ರಾಜ್ಯ ಮಹಿಳಾ ಪ್ರಮುಖ, ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಹಂತದಲ್ಲಿ 'ಶಿಕ್ಷಣ ಅದಾಲತ್' ರಚಿಸಿ ನಿಗದಿತ ದಿನಾಂಕದಂದು ನಿಗದಿತ ಸಮಯದಲ್ಲಿ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಕೋರಿ ಮನವಿ ಪತ್ರ ಸಲ್ಲಿಸಲಾಯಿತು.
- ಶಾಲಾವಾಸ್ತವ್ಯ– ಶ್ರೀ ಜೋಷಿ ಜಿ ಯವರು, ಖಜಾಂಚಿಗಳು, ಮಾನ್ಯ ಸಚಿವರ ಶಾಲಾ ವಾಸ್ತವ್ಯದ ಕುರಿತು ಅಭಿನಂದನೆ ಸಲ್ಲಿಸಿ ಆ ಕಾರ್ಯವನ್ನು ಮುಂದುವರೆಸುವಂತೆ ಮನವಿ ಸಲ್ಲಿಸಲಾಯಿತು. ಡಿ.ಎಡ್. ಶಿಕ್ಷಕರ ಸಮಸ್ಯೆ ಅದಕ್ಕೆ ಪರಿಹಾರ ಸೂಚಿಸುವಂತೆ ಮಾನ್ಯ ಶಿಕ್ಷಣ ಸಚಿವರಿಗೆ ಶ್ರೀ ಜಿ.ಕೆ ತಳವಾರ, ರಾಜ್ಯ ಕಾರ್ಯದರ್ಶಿ ಪ್ರಸ್ತುತ ಪಡಿಸಿ ಮನವಿ ಸಲ್ಲಿಸಿದರು.
- ಇನ್ನೂ ಹಲವು ಪ್ರಮುಖ ಸಮಸ್ಯೆಗಳ ಕುರಿತು ಎನ್ ಪಿ ಎಸ್ ರದ್ದತಿ ಪ್ರೌಢಶಾಲಾ ಶಿಕ್ಷಕರ ಬಡ್ತಿ, ಹಿಂದಿನಂತೆ ಶಿಕ್ಷಕರಿಗೆ 15 ದಿನಗಳ ಸಾಂದರ್ಭಿಕ ರಜೆಯ ಮುಂದುವರಿದ ವರ್ಗಾವಣೆ ನೀತಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಶಿಕ್ಷಕ ಸ್ನೇಹಿ ವರ್ಗಾವಣೆ ಮುಂತಾದ ವಿಷಯಗಳ ಕುರಿತು ಮನವಿ ಸಲ್ಲಿಸಲಾಯಿತು.

ನಂತರದ ಒಂದು ಗಂಟೆಯ ಹಿರಿಯರು, ಪದಾಧಿಕಾರಿಗಳು ಭಾಗವಹಿಸಿದ ಶಿಕ್ಷಕರೊಂದಿಗೆ ಚರ್ಚಿಸಿದರು. ಮಾನ್ಯ ಸಚಿವರು ನಮ್ಮ ಮನವಿಗಳನ್ನು ಪುರಸ್ಕರಿಸಿ, ಶಿಕ್ಷಣ ಆದಾಲತ್ ಜಾರಿಗೆ ಸಲ್ಲಿಸಿದ ಮನವಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ತಕ್ಷಣಕ್ಕೆ ಜಾರಿಗೆ ಬರುವಂತೆ ಕ್ರಮ ವಹಿಸುವುದಾಗಿ ತಿಳಿಸಿದರು. ನಮ್ಮ ಸಂಘದ ವಿಚಾರಗಳು, ಕಾರ್ಯಕ್ರಮಗಳನ್ನು ಶ್ಲಾಘಿಸಿದರು. ಸಂಘದ ಸರ್ಕಾರದ ಮಾನ್ಯತೆ ಕುರಿತು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಅದನ್ನು ಶೀಘ್ರವಾಗಿ ಮಾನ್ಯತೆ ದೊರಕಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಶಿಕ್ಷಕರ ಬೇಡಿಕೆಯಾದ 15 ಸಾಂದರ್ಭಿಕ ರಜೆಗಳ ಮುಂದುವರಿಕೆ ಕುರಿತು ಶೀಘ್ರವೇ ಆದೇಶ ಹೊರಡಿಸುವುದಾಗಿ ತಿಳಿಸಿದರು. ಇನ್ನೂ ಪ್ರಮುಖವಾದ ಸಮಸ್ಯೆ ವರ್ಗಾವಣೆ ನೀತಿ, ಅಲ್ಲಿರುವ ಗೊಂದಲ, ಕಡ್ಡಾಯ ವರ್ಗಾವಣೆ ಮುಂತಾದ ವಿಷಯಗಳಿಗೆ ಶಾಶ್ವತವಾದ ಪರಿಹಾರ ಹಾಗೂ ಶಿಕ್ಷಕ ಸ್ನೇಹಿ ವರ್ಗಾವಣೆ ನೀತಿ ಜಾರಿಗೆ ಸಂಘದ ಸಹಾಯ, ಸಲಹೆ ಸೂಚನೆಗಳಿಗೆ ಮುಕ್ತ ಆಹ್ವಾನ ನೀಡಿದರು.

ಮಾನ್ಯ ಸಚಿವರು, ಶಿಕ್ಷಣ ಸಚಿವರಾದ ನಂತರ ತಮ್ಮ ಅನುಭವಗಳನ್ನು ಮುಕ್ತವಾಗಿ ಹಂಚಿಕೊಂಡು, ಇಲಾಖೆಯಲ್ಲಿನ ಸಮಸ್ಯೆಗಳು ಅವುಗಳ ತೀವ್ರತೆಯ ಕುರಿತು ಕಳವಳವನ್ನು ವ್ಯಕ್ತಪಡಿಸಿ ಎಲ್ಲದಕ್ಕೂ ಒಂದು ಶಾಶ್ವತ ಮತ್ತು ಸ್ನೇಹಪರವಾದ ಮುಕ್ತ ಪಾರದರ್ಶಕ ವಾತಾವರಣಗಳ ನಿರ್ಮಾಣ ಹಾಗೂ ಅದರ ಬದ್ಧತೆಗಾಗಿ ಶ್ರಮಿಸುವುದಾಗಿ ತಿಳಿಸಿದರು. ನಮ್ಮ ಶಿಕ್ಷಕ ಸಂಘದ ಆಯೋಜನೆಯ ಈ ಎರಡು ಗಂಟೆಗಳ 'ಶಿಕ್ಷಣ ಮತ್ತು ಶಿಕ್ಷಕ' ಕುರಿತ ಸಂವಾದ ಆರೋಗ್ಯಕರವಾಗಿತ್ತು ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಮುಕ್ತ ಚರ್ಚೆ ಸಲಹೆ ಸೂಚನೆಗಳಿಗೆ ಸದಾ ತಾವು ಸಿದ್ಧರೆಂದು ತಿಳಿಸಿ, ನಮ್ಮ ಸಂಘದ ಸಹಕಾರ ಹಾಗೂ ಸಲಹೆಗಳನ್ನು ಕೋರಿದರು.

ಕೊನೆಯಲ್ಲಿ ಶಿಕ್ಷಕ ಸಂಘದ ಹಿರಿಯರು, ಎ.ಬಿ.ಆರ್.ಎಸ್.ಎಂನ ಪೋಷಕರಾದ ಶ್ರೀ ಬಾಲಕೃಷ್ಣಭಟ್‌ಜಿಯವರು ಸಚಿವರ ಮುಕ್ತ ವಿಚಾರಗಳ ಕುರಿತು ಅಭಿನಂದನೆಯನ್ನು ವ್ಯಕ್ತಪಡಿಸಿದರು. ಶಿಕ್ಷಕ ಸಂಘವು ಸದಾ ಅವರ ಸಹಾಯಕ್ಕಾಗಿ ಸಿದ್ದ ಎಂದು ಭರವಸೆ ನೀಡಿದರು. ಶ್ರೀ ವೃಷಭೇಂದ್ರಸ್ವಾಮಿ ರಾಜ್ಯ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು.

MAG(3)/NPP/26/2018-19 Registered No. RNI 45459/85
Posted at Bangalore PSO Bangalore -560 026
Date of Publishing : 17-10-2019 Date of Posting 20h or 21st of every month Posted at Periodical Rate

# ಚಿತ್ರ ಸುದ್ದಿ



ಕೋರ್ ಕಮಿಟಿಯ ಸದಸ್ಯರಿಗೆ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆದ ಒಂದು ದಿನದ ಅಭ್ಯಾಸವರ್ಗ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರಾದ ಅರುಣ್ ಶಹಾಪುರ್ ಅವರ ಸಮ್ಮುಖದಲ್ಲಿ ರಚನೆಯಾದ ವಿಜಯಪುರದ ಹೊಸ ಕಾರ್ಯಕಾರಿಣಿ



ನೂತನವಾಗಿ ರಚನೆಯಾದ ರಾಮನಗರ ಜಿಲ್ಲಾ ಕಾರ್ಯಕಾರಿಣಿ



ನೂತನವಾಗಿ ರಚನೆಯಾದ ಯಾದಗಿರಿ ಜಿಲ್ಲಾ ಕಾರ್ಯಕಾರಿಣಿ

**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ
akss1950@gmail.com Emailಗೆ ಕಳುಹಿಸಿಕೊಡಿ.
ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com